ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Pages : 48 | 12₹

Swabhimani Sahakari

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 16
Issue - 1
January - 2019

## ಬಿ.ಜೆ.ಪಿ. ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಅಮಿತಾ ಶಾ, ಕೇಂದ್ರ ಹಣಕಾಸು ರಾಜ್ಯ ಸಚಿವ ಶ್ರೀ ಶಿವಪ್ರತಾಪ್ ಶುಕ್ಲಾ, ಕೇಂದ್ರ ತೆರಿಗೆ ಮಂಡಳಿ (ಸಿಬಿಡಿಟಿ) ಅಧ್ಯಕ್ಷ ಶ್ರೀ ಸುಶೀಲಚಂದ್ರ ಅವರಲ್ಲಿ ಸಂಯುಕ್ತ ಸಹಕಾರಿಯ ನಿಯೋಗಕ್ಕೆ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ತೊಂದರೆಯಾಗದಂತೆ ಕ್ರಮದ ಭರವಸೆ









## ಸೌಹಾರ್ದ ಸಹಕಾರಿ ಕಾಯ್ದೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿಗೆ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ಹಾಗೂ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಖಾಶಂಪೂರ ಸಕಾರಾತ್ಮಕ ಸ್ಪಂದನೆ










ಜನವರಿ 1 ಸೌಹಾರ್ದ ಸಹಕಾರಿ ದಿನ, ಜನವರಿ 15 ಮಕರ ಸಂಕ್ರಾಂತಿ, ಜನವರಿ 26 ಗಣರಾಜ್ಯೋತ್ಸವದ ಹಾಗೂ ರಾಜ್ಯದ ಸಹಕಾರಿಗಳಿಗೆ ನೂತನ ವರ್ಷ 2019ರ ಹಾರ್ದಿಕ ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 4501

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1195

# ರಾಷ್ಟ್ರೀಯ ನೀತಿ ಆಯೋಗದ ಸಭೆಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿ ಕ್ರಮಗಳ ಚಿಂತನೆ. ಕರ್ನಾಟಕದ ಸೌಹಾರ್ದ ಸಹಕಾರಿಯ ಮಾದರಿ ಪ್ರಸ್ತಾವ; ಕರ್ನಾಟಕ ರಾಜ್ಯಕ್ಕೆ ಹೆಮ್ಮೆ



ಬಿ.ಹೆಚ್. ಕೃಷ್ಣಾರೆಡ್ಡಿ

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ನೂತನ ವರ್ಷ 2019, ಮಕರ ಸಂಕ್ರಾಂತಿಯ ಹಾಗೂ 69ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ನೂತನ ವರ್ಷ 2019 ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಉತ್ಸಾಹವನ್ನು ಮೂಡಿಸಲಿ. 2018ರಲ್ಲಿ ಎದುರಿಸಿದ ಸವಾಲುಗಳು ಮತ್ತೆ ಮರುಕಳಿಸದಿರಲಿ. ಎಲ್ಲ ಸವಾಲುಗಳನ್ನು ಎದುರಿಸಿ ಯಶಸ್ಸು ಸಾಧಿಸುವ ಶಕ್ತಿಯನ್ನು ದೇವರು ನಮ್ಮೆಲ್ಲರಿಗೂ ದಯಪಾಲಿಸಲಿ ಎಂದು ಹಾರೈಸುತ್ತೇನೆ.

ದಿನಾಂಕ 20.11.2018ರಂದು ನವದೆಹಲಿಯಲ್ಲಿ ನೀತಿ ಆಯೋಗದ ಉಪಾಧ್ಯಕ್ಷರಾದ ಶ್ರೀ ರಾಜೀವಕುಮಾರ ನೇತೃತ್ವದಲ್ಲಿ ರಾಷ್ಟ್ರೀಯ ನೀತಿ ಆಯೋಗದ ಸಭೆ ನಡೆದಿದೆ. ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರ ರವರು ಸೇರಿದಂತೆ ರಾಜ್ಯದ ಅನೇಕ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ಹಾಗೂ ಪ್ರತಿನಿಧಿಗಳು ಭಾಗವಹಿಸಿದ್ದರು. ಸಹಕಾರ ಕ್ಷೇತ್ರದ ಅಭಿವೃದ್ಧಿ ಕುರಿತಂತೆ ಅನೇಕ ವಿಷಯಗಳ ಚಿಂತನೆ ನಡೆದಿದೆ. ಪ್ರಮುಖವಾಗಿ ರಾಷ್ಟ್ರೀಯ ಸಹಕಾರಿ ನೀತಿಯನ್ನು ಸಿದ್ಧಪಡಿಸುವುದು, ಸಹಕಾರಿ ರಂಗಕ್ಕೆ ನಿರ್ದಿಷ್ಟವಾದ ತೆರಿಗೆ ನೀತಿಯನ್ನು ರೂಪಿಸುವುದು, ಸಹಕಾರಿ ರಂಗದಲ್ಲಿ ಸದಸ್ಯರಿಗೆ ಮೌಲ್ಯವರ್ಧಿತ ಸೇವೆಯನ್ನು ನೀಡುವಂತೆ ಕ್ರಮವಿಡಬೇಕು, ಸಂವಿಧಾನದ 97 ನೇ ತಿದ್ದುಪಡಿಯನ್ನು ಅಕ್ಷರಶಃ ಪಾಲಿಸುವುದು ಮತ್ತು ನಗದುರಹಿತ ವ್ಯವಹಾರಕ್ಕೆ ಪ್ರೋತ್ಸಾಹಕ್ಕೆ ನೀಡುವುದು ಹೀಗೆ ಅನೇಕ ವಿಷಯಗಳ ಬಗ್ಗೆ ಚಿಂತನೆ ನಡೆದಿದೆ. ಇವುಗಳ ಜೊತೆಗೆ ಕರ್ನಾಟಕದ ಮಾದರಿ ಸೌಹಾರ್ದ ಸಹಕಾರಿ ಚಳುವಳಿ ರಚನಾತ್ಮಕವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಮಾದರಿ ದೇಶದ ಎಲ್ಲ ರಾಜ್ಯಗಳಲ್ಲೂ ಕಾರ್ಯನಿರ್ವಹಿಸುವಂತೆ ಕ್ರಮವಿಡುವುದು ಅಗತ್ಯ ಎಂದು ಆರ್.ಬಿ.ಐ ನಿರ್ದೇಶಕ ಹಾಗೂ ಸಹಕಾರಿ ಕ್ಷೇತ್ರದ ಪ್ರಮುಖರಲ್ಲೊಬ್ಬರಾದ ಶ್ರೀ ಸತೀಶ ಮರಾಠೆಯವರು ಪ್ರಸ್ತಾಪ ಮಾಡಿರುವುದು ಮತ್ತು ಆ ಬಗ್ಗೆ ಸಭೆಯು ಸಂತೋಷ ವ್ಯಕ್ತ ಪಡಿಸಿರುವುದು ಕರ್ನಾಟಕದ ಸೌಹಾರ್ದ ಸಹಕಾರಿಗಳಿಗೆ, ಕರ್ನಾಟಕ ರಾಜ್ಯ ಸರಕಾರಕ್ಕೆ ಹೆಮ್ಮೆಯ ವಿಷಯ. ಸಂತೋಷಪಡುವ ವಿಷಯ ಎಂದು ನಾನು ಭಾವಿಸಿದ್ದೇನೆ.

ಕರ್ನಾಟಕದ ಸೌಹಾರ್ದ ಸಹಕಾರಿ ಸಮಗ್ರ ದೇಶಕ್ಕೆ ಮಾದರಿಯಾಗಿರುವ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಪ್ರಯತ್ನಿಸಿದ ಅಂದಿನ ಸಹಕಾರ ಸಚಿವ ಶ್ರೀ ಎಸ್.ಎಸ್.ಪಾಟೀಲ ರವರಿಗೆ ಎಲ್ಲ ಸಹಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ಈ ಕಾಯ್ದೆಯ ಬೆಳವಣಿಗೆಗೆ ರಾಜ್ಯದಲ್ಲಿ ಪ್ರೋತ್ಸಾಹಿಸುತ್ತ ಬಂದಿರುವ ಎಲ್ಲ ಸರಕಾರಗಳ ಸಹಕಾರ ಸಚಿವರುಗಳಿಗೆ ಹಾಗು ಪ್ರಸಕ್ತ ಸಹಕಾರ ಸಚಿವರಾಗಿರುವ ಶ್ರೀ ಬಂಡೆಪ್ಪ ಕಾಶ್ಯಂಪೂರ ರವರಿಗೆ ಹಾಗೂ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಸಹಕಾರಿಗಳ ನಿಬಂಧಕರಿಗೆ ಹಾಗು ಎಲ್ಲ ಅಧಿಕಾರಿಗಳಿಗೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಹಂತದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಜವಾಬ್ದಾರಿ ಇನ್ನೂ ಹೆಚ್ಚಿದೆ ಎಂದು ನನ್ನ ಅಭಿಪ್ರಾಯ. ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಉನ್ನತಮಟ್ಟದ್ದಾಗಿರಬೇಕು. ದೋಷರಹಿತವಾಗಿರಬೇಕು. ಬೇರೆ ಸಹಕಾರಿ ಸಂಸ್ಥೆಗಳಿಗೆ ಮಾದರಿಯಾಗಿರಬೇಕು. ಸದಸ್ಯರಿಗೆ ಮೌಲ್ಯವರ್ಧಿತ ಸೇವೆಗಳು ಲಭ್ಯವಾಗಬೇಕು ಸೌಹಾರ್ದ ಸಹಕಾರಿಗಳು ಉತ್ತಮ ಆರ್ಥಿಕ ಸೇವೆಗಳ ಕೇಂದ್ರವಾಗಬೇಕು. ಸಂಖ್ಯಾತ್ಮಕವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿಯೂ ಬೆಳೆಯುವಲ್ಲಿ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಯವರು ಕಾರ್ಯನಿರ್ವಹಿಸುವುದು ಅಗತ್ಯ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

> ಕರ್ನಾಟಕದ ಸೌಹಾರ್ದ ಸಹಕಾರಿ ಸಮಗ್ರ ದೇಶಕ್ಕೆ ಮಾದರಿಯಾಗಿರುವ ಹಿನ್ನೆಲೆಯಲ್ಲಿ ಈ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಪ್ರಯತ್ನಿಸಿದ ಅಂದಿನ ಸಹಕಾರ ಸಚಿವ ಶ್ರೀ ಎಸ್.ಎಸ್.ಪಾಟೀಲ ರವರಿಗೆ ಎಲ್ಲ ಸಹಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಆದಾಯ ತೆರಿಗೆ ಸಂಬಂಧಿಸಿದ ಮುಖ್ಯಾಂಶಗಳು ........ 5-7
ಸಂಯುಕ್ತ ಸಹಕಾರಿ ಹಾಗೂ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ........ 8-13
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 14-26
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 27-36
ಲೇಖನ ........ 37-45
ಆರ್‌ಬಿಐ ನ್ಯೂಸ್ ........ 46-47

# ಸಂಪಾದಕೀಯ

## ರಾಷ್ಟ್ರೀಯ ಸಹಕಾರ ನೀತಿ ಅಗತ್ಯತೆ

ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರದ ಪಾತ್ರವನ್ನು ಗುರುತಿಸಿರುವುದು ಸ್ವಾಗತಾರ್ಹ. ಈ ದೇಶದ ಸಹಕಾರ ಚಳುವಳಿಗೆ 114 ವರ್ಷಗಳ ಇತಿಹಾಸ. 6.5 ಲಕ್ಷ ಸಹಕಾರಿ ಸಂಸ್ಥೆಗಳು ಹಾಗೂ 30 ಕೋಟಿ ಸದಸ್ಯರ ಬಳಗವಿದೆ. ದೇಶದಲ್ಲಿ ಹಸಿರು ಕ್ರಾಂತಿ, ಆಹಾರ ಸ್ವಾವಲಂಬನೆ ಆರ್ಥಿಕ ಅಭಿವೃದ್ಧಿಯಲ್ಲಿ ಗ್ರಾಮೀಣ ಜನರ ಬದುಕಿನ ನೆಲೆಗಟ್ಟಾಗಿದೆ. ಆ ಜನರ ಜೀವನ ಪದ್ಧತಿಯಾಗಿದೆ. ವಿಶ್ವದಲ್ಲಿಯೇ ಬೃಹತ ಸಹಕಾರ ಚಳುವಳಿ ನಮ್ಮ ದೇಶದ್ದಾಗಿದೆ. ಅದಾಗ್ಯೂ ಅನೇಕ ಮಹತ್ವದ ಆರ್ಥಿಕ ನಿರ್ಣಯಗಳಲ್ಲಿ ಮತ್ತು ಆರ್ಥಿಕ ಸುಧಾರಣೆಯ ಕ್ರಮಗಳಲ್ಲಿ ಸಹಕಾರ ಕ್ಷೇತ್ರವನ್ನು ಕಡೆಗಣಿಸಿರುವ ಅನೇಕ ಉದಾಹರಣೆಗಳಿವೆ. ಸಹಕಾರ ಕ್ಷೇತ್ರವನ್ನು ಸರಕಾರದ ಅನೇಕ ಯೋಜನೆಗಳ ಜಾರಿಗೆ ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಅದರೆ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಬಲಪಡಿಸುವುದಕ್ಕೆ ಅಗತ್ಯ ಮಹತ್ವ ನೀಡಲಾಗುತ್ತಿಲ್ಲ. ಇವೆಲ್ಲವುಗಳಿಗೆ ರಾಷ್ಟ್ರೀಯ ಸಹಕಾರ ನೀತಿ ರಚನೆಯಿಂದ ಸೂಕ್ತ ಉತ್ತರ ಕಂಡುಕೊಳ್ಳಬೇಕಿದೆ.

ದೇಶದಲ್ಲಿ ಸಹಕಾರ ನೀತಿಯನ್ನು ರಚಿಸಿದ ಪ್ರಥಮ ರಾಜ್ಯ ಕರ್ನಾಟಕ. ನಂತರ ಕೆಲವು ರಾಜ್ಯಗಳಲ್ಲಿ ಸಹಕಾರ ನೀತಿ ರಚಿಸಲು ಕ್ರಮವಿಡಲಾಗಿದೆ. ರಾಷ್ಟ್ರೀಯ ಸಹಕಾರ ನೀತಿ ರಚನೆಗೆ ಅಗತ್ಯ ಕ್ರಮವಿಡುವ ಸಂದರ್ಭದಲ್ಲಿ ಈಗಾಗಲೇ ಕೆಲವು ರಾಜ್ಯಗಳಲ್ಲಿ ಜಾರಿಗೆ ಬಂದಿರುವ ಸಹಕಾರ ನೀತಿಯ ಪ್ರಮುಖ ಅಂಶಗಳನ್ನು ಗಮನಿಸುವುದು ಅಗತ್ಯವೆನಿಸುತ್ತದೆ.

ರಾಷ್ಟ್ರೀಯ ಸಹಕಾರ ನೀತಿಯನ್ನು ರಚಿಸುವಾಗ ಕೆಲವು ಮಹತ್ವದ ವಿಷಯಗಳನ್ನು ಗಮನಿಸುವುದು ಅಗತ್ಯ. ಸಹಕಾರ ಕ್ಷೇತ್ರದಲ್ಲಿ ಸರಕಾರಗಳ ಪಾತ್ರ, ಸರಕಾರದ ಹಸ್ತಕ್ಷೇಪ, ಸಹಕಾರ ಕಾಯ್ದೆಗಳನ್ನು ರಚಿಸುವಲ್ಲಿ ಸಹಕಾರಿಗಳ ಅನುಭವಗಳಿಗೆ ಮನ್ನಣೆ, ಪ್ರಮುಖವಾಗಿ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರಿ ಕ್ಷೇತ್ರಕ್ಕೆ ಮಾನ್ಯತೆ, ಸರಕಾರಗಳ ಪ್ರಮುಖ ಯೋಜನೆಗಳು ಸಹಕಾರ ಕ್ಷೇತ್ರದ ಮೂಲಕವೇ ಜಾರಿಯಾಗುವುದು, ಸಹಕಾರ ಕ್ಷೇತ್ರವನ್ನು ಬಲಪಡಿಸುವ ಕ್ರಮಗಳು, ಸಹಕಾರ ಕ್ಷೇತ್ರಕ್ಕೆ ಸೂಕ್ತ ಅಭಿವೃದ್ಧಿ ಪರ ತೆರಿಗೆ ವ್ಯವಸ್ಥೆ, ಶಿಕ್ಷಣ ಹಾಗೂ ತರಬೇತಿಗೆ ಆದ್ಯತೆ, ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಹಕಾರ ಸಂಸ್ಥೆಗಳ ಕ್ರಿಯಾಶೀಲ ಪಾತ್ರ, ಪ್ರಾಥಮಿಕ ಸಹಕಾರ ಸಂಸ್ಥೆಗಳು ಸಧೃಡವಾಗಿ ಬೆಳೆದು ಕಾರ್ಯನಿರ್ವಹಿಸುವ ಕಾರ್ಯಸೂಚಿ ಇವುಗಳನ್ನು ಗಮನಿಸುವುದು ಅವಶ್ಯಕ.

ರಾಷ್ಟ್ರೀಯ ಸಹಕಾರ ನೀತಿ ರಚಿಸುವ ಸಂದರ್ಭದಲ್ಲಿ ರಾಷ್ಟ್ರದ ರಾಜ್ಯಗಳ ಹಿರಿಯ ಸಹಕಾರಿಗಳ ನುರಿತ ಅಧಿಕಾರಿಗಳ ಅನುಭವಗಳಿಗೆ ಮಾನ್ಯತೆ ನೀಡುವುದು ಅಗತ್ಯ. ರಾಷ್ಟ್ರೀಯ ಸಹಕಾರ ನೀತಿ ರಚನೆಯಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅದನ್ನು ಅಳವಡಿಸಿ ಕಾರ್ಯನಿರ್ವಹಿಸಲು ಪ್ರಾರಂಭವಾಗುವುದು ಸಹಕಾರ ಕ್ಷೇತ್ರದ ಸಧೃಡ ಬೆಳವಣಿಗೆಯ ಸಂಕೇತವೆಂದು ಭಾವಿಸಬಹುದು.



# ಜ್ಞಾನ ಜ್ಯೋತಿ

ಎಂ.ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು ಬೆಂಗಳೂರು.

## "ತಲ್ಲಣಿಸದಿರು ಕಂಡ್ಯಾ ತಾಳು ಮನವೆ"

ಆಧುನಿಕ ಜಗತ್ತಿನ ಮಾನವ ತನ್ನ ವಿಜ್ಞಾನದ ಸಂಶೋಧನೆಗಳಿಂದ ಉತ್ಕೃಷ್ಟ ಸಾಧನೆಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಸಾಧಿಸಿದ್ದರೂ ಆತನಿಗೆ "ಮಾನಸಿಕ ತೃಪ್ತಿ"ಯೆಂಬುದರ ಕೊರತೆಯದ್ದು ಕಾಣುತ್ತಿದೆ. "ಹಕ್ಕಿಯಂತೆ ಹಾರುವುದನ್ನು ಕಲಿತ", "ಮೀನಿನಂತೆ ಈಜುವುದನ್ನು ಕಲಿತ", ಆದರೆ, ಮಾನವ ಸಂಬಂಧಗಳ ವೃದ್ಧಿಯ ವಿಷಯದಲ್ಲಿ ತೀರಾ ಬಡವನಾಗುತ್ತಿದ್ದಾನೆಂದರೆ ಅತಿಶಯೋಕ್ತಿಯಾಗುವುದಿಲ್ಲ. ತಾನು ಎಲ್ಲರಿಗಿಂತ ಉತ್ಕೃಷ್ಟದವನಾಗಿರಬೇಕೆಂಬ ಬಯಕೆ ಕೆಟ್ಟದ್ದಲ್ಲ. ಆದರೆ ಅದೇ ಹವಣಿಯಕೆಯಲ್ಲಿ ಮಾನಸಿಕ ತೃಪ್ತಿಯನ್ನು ಬಲಿಕೊಡುತ್ತಿರುವುದನ್ನು ಕಂಡ ಡಿ.ವಿ.ಜಿ.ಯವರು ಇಂದಿನ ಪದ್ಯದಲ್ಲಿ ಕ್ಷಣಕ್ಷಣಕ್ಕೂ ಮುಟಿದೇಳುವ ಆಸೆಗಳ ಸರಣಿಗಳನ್ನು ಪ್ರಸ್ತಾಪಿಸಿ ಅದಕಾಗಿ ಇದಕಾಗಿ ಮತ್ತೊಂದಕಾಗಿ ಹಾತೊರೆಯುತ್ತಾ, ಮನಸ್ಸನ್ನು ಕುದಿಯುವಂತಹ ಸ್ಥಿತಿಯಲ್ಲಿರುವ ಅಂಶಗಳನ್ನು ತುಂಬಾ ವೇದ್ಯವಾಗಿ ಸ್ಪರ್ಶಿಸಿದ್ದಾರೆ. ಪದ್ಯದ ಲಯಬದ್ಧ ಹರಿವನ್ನು ಗಮನಿಸಿ,

"ಬೆದಕಾಟ ಬದುಕೆಲ್ಲ ಚಣಚಣವು ಹೊಸ ಹಸಿವು।
ಅದಕಾಗಿ ಇದಕಾಗಿ ಮತ್ತೊಂದಕಾಗಿ॥
ಅಧಿಕಾರ ಸಿರಿ ಸೊಗಸು ಕೀರ್ತಿಗಳ ನೆನೆದು ಮನ।
ಕುದಿಯುತಿಹುದಾವಗಂ ॥ ಮಂಕುತಿಮ್ಮ ॥

ದೈವಾಂಶಸಂಭೂತರೆನಿಸಿದ ಕನಕದಾಸರು ಮನಸ್ಸಿನ ತಲ್ಲಣವನ್ನು ನಿಲ್ಲಿಸಿರೆಂಬ ಬಗ್ಗೆ ಕವನವೊಂದನ್ನು ರಚಿಸಿ, ಮರಗಿಡಗಳ, ಮೃಗಪಕ್ಷಿಗಳ ಹಾಗೂ ಕಪ್ಪೆ ಮುಂತಾದ ಪ್ರಾಣಿಗಳ ಜೀವನ ನಿರ್ವಹಣೆಯ ಸುಗಮತೆಯನ್ನು ಪ್ರಸ್ತಾಪಿಸುತ್ತಾ, "ಬೆಟ್ಟದ ಮೇಲೆ ಹುಟ್ಟಿರುವ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ? ಅಡವಿಯೊಳಗಾಡುವ ಮೃಗಪಕ್ಷಿಗಳಿಗೆಲ್ಲಾ ಅಡಿಗಡಿಗಾಹಾರವಿತ್ತವರು ಯಾರು ಹಾಗೂ ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆ ಆಹಾರವಿತ್ತವರು ಯಾರೆಂದು ಪ್ರಶ್ನಿಸಿ ಸಾರ್ವತ್ರಿಕ ಉತ್ತರವಾಗಿ, "ಹುಟ್ಟಿಸಿದ ಸ್ವಾಮಿ ಹೊಣೆಗಾರನಾಗಿ ಹಡೆದ ಜನನಿಯ ತೆರದಿ ಬಿಡದೆ ರಕ್ಷಿಪನಿದಕೆ ಸಂದೇಹಬೇಡ, ತಲ್ಲಣಿಸದಿರು ಕಂಡ್ಯಾ ತಾಳು ಮನವೇ", ಎಂದು ಕುದಿಯುವ ಅಶಾಂತ ಉದ್ವಿಗ್ನ ಮನ ಹೊಂದಿದ ಇಂದಿನ ನಮ್ಮಗಳಿಗೆ ಶಾಶ್ವತ ಸಾಂತ್ವನ ನೀಡಿದ್ದಾರೆ. ಅಸೀಮರು, ಅಪ್ರಮೇಯ, ಸ್ವಪ್ರಕಾಶ, ಸೃಷ್ಟಿ, ಸ್ಥಿತಿ ಲಯಕರ್ತನಿರುವಾಗ ನಮ್ಮಿಷ್ಟಗಳ ಈಡೇರಿಕೆಗೆ ಬಹಳಷ್ಟು ಒದ್ದಾಡಿ ನೆಮ್ಮದಿಯನ್ನು ಕಳೆದುಕೊಳ್ಳಬೇಕಾದ ಅಂಶವಿಲ್ಲವೆನ್ನುತ್ತಾರೆ.

ಸಾಧಾರಣ ದೃಷ್ಟಾಂತವಾದ ಪೊರಕೆಯ ಕಡ್ಡಿಗಳು ದಾರದಿಂದ ಕಟ್ಟಲ್ಪಟ್ಟಿದ್ದರೆ ಕಸವನ್ನು ಗುಡಿಸಬಹುದು. ಆದರೆ, ಕಡ್ಡಿಗಳೇ ಉದುರಿದರೆ ಅವೇ ಕಸವಾಗುವುವು. ಆದ್ದರಿಂದ ನಾವು ಬಿಡಿಯಾಗಿ ಬೀಳದೇ ಇಡಿಯಾಗಿ ಉಳಿದು ಸಹಕಾರ ಎಂಬ ದಾರದಿಂದ ಒಂದಾಗಿ ಅದ್ವೀತಿಯವಾದುದನ್ನು ಸಾಧಿಸೋಣ. ತತ್ಕಾರಣ ನಿಮಿಷ ನಿಮಿಷಕ್ಕೂ ಶ್ವಾಸೋಚ್ವಾಸಗಳಲ್ಲಿ ಭಗವಂತನ ಸ್ಮೃತಿಯನ್ನಿಟ್ಟುಕೊಂಡು, "ನಾವೆಲ್ಲರೂ ಭಗವಂತನ ಮಕ್ಕಳು, ಒಂದೇ ಸಂಸಾರದ ಸದಸ್ಯರು", ಎಂಬ ಭಾವನೆಯಿಂದ ಬದುಕಿದಲ್ಲಿ ಬೆದಕಾಟಕ್ಕೆ ಎಡೆಯಿರದೆ, ಸಾಂತ್ವನ ಪ್ರಶಾಂತಗಳೇ ಮೂಡಿಬಂದು ಈ ಧರೆಯೇ ಸ್ವರ್ಗವಾಗುತ್ತದೆಂಬುದು ಈ ಪದ್ಯದ ಸಾರಾಂಶ.

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ವೋಕು (ವರ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್) ಅಂತರರಾಷ್ಟ್ರೀಯ ಅಧ್ಯಕ್ಷರ ಭೇಟಿ



ಸರ್ ಬ್ರಿಯಾನ್ ನೀ. ಬ್ರಾಂಚ್, ಅಧ್ಯಕ್ಷರು ವರ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್ ಹಾಗೂ ಸರ್ ಕೆರಿ ನೇಲರ್ ಯವರು ತಂಡದ ಇತರ ಗಣ್ಯರೊಂದಿಗೆ ದಿನಾಂಕ 17.01.2019ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಲಿದ್ದಾರೆ. ಅವರು ವಿಶೇಷವಾಗಿ ಕರ್ನಾಟಕದ ಸೌಹಾರ್ದ ಸಹಕಾರಿ ಚಳುವಳಿ ಹಾಗೂ ಅದರ ಯಶಸ್ಸಿನ ವಿಷಯವನ್ನು ಅಧ್ಯಯನ ಮಾಡಲಿದ್ದಾರೆ. ಇವರ ಜೊತೆಗೆ ಆರ್.ಬಿ.ಐ. ನಿರ್ದೇಶಕ ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಸತೀಶ್ ಮರಾಠೆ, ಸಹಕಾರ ಭಾರತೀಯ ಪ್ರಮುಖರಾದ ಶ್ರೀ ಉದಯ ಜೋಶಿ, ಶ್ರೀ ನಿಮಿಶ ಪಟೇಲರವರುಗಳು ಭೇಟಿ ನೀಡಲಿದ್ದಾರೆ.

ವೋಕು ಸಂಸ್ಥೆಯು 103 ದೇಶಗಳಲ್ಲಿನ 57000 ಕ್ರೆಡಿಟ್ ಯೂನಿಯನ್‌ಗಳ 208 ಮಿಲಿಯನ್ ಜನರ ಸದಸ್ಯತ್ವವನ್ನು ಹೊಂದಿರುವ ಅಂತರರಾಷ್ಟ್ರೀಯ ಸಂಸ್ಥೆಯಾಗಿದೆ, ಇದು ಆಕ್ಲೆಂಡ್ ನಲ್ಲಿದೆ.

## ಆದಾಯ ತೆರಿಗೆ ಇಲಾಖೆಯ ತೊಂದರೆ ನಿವಾರಣೆಗೆ ಭರವಸೆ ಬಿ.ಜೆ.ಪಿ. ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಅಮಿತಾ ಶಾ, ಕೇಂದ್ರ ಹಣಕಾಸು ರಾಜ್ಯ ಸಚಿವ ಶ್ರೀ ಶಿವಪ್ರತಾಪ್ ಶುಕ್ಲಾ, ಕೇಂದ್ರ ತೆರಿಗೆ ಮಂಡಳಿ (ಸಿಬಿಡಿಟಿ) ಅಧ್ಯಕ್ಷ ಶ್ರೀ ಸುಶೀಲಚಂದ್ರ ರವರ ಭೇಟಿ

## ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲು ಕ್ರಮ - ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಸಹಕಾರ ಸಚಿವ ಶ್ರೀ ಬಂಡೆಪ್ಪ ಖಾಶಂಪೂರ ಸಕಾರಾತ್ಮಕ ಪ್ರತಿಕ್ರಿಯೆ

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತಗಾದೆಯಿಂದ ಮುಕ್ತವಾಗಿಸಲು ನಿತ್ಯ ನಿರಂತರ ಪ್ರಯತ್ನವನ್ನು ಮಾಡಲಾಗುತ್ತಿದೆ. ಸಹಕಾರ ಸಪ್ತಾಹದ ಸಮಯದಲ್ಲಿ ಹಾಗೂ ಬೆಳಗಾವಿಯ ಅಧಿವೇಶನದಲ್ಲಿ ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಮಹಂತೇಶ ಕವಟಗಿಮಠರವರ ನೇತೃತ್ವದಲ್ಲಿ ಹಾಗೂ ಶ್ರೀ ರಾಜ್ಯಸಭಾ ಸದಸ್ಯ ಶ್ರೀ ಪ್ರಭಾಕರ ಕೋರೆ ಇವರೊಂದಿಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು ಮನವಿ ಸಲ್ಲಿಸಿ ಸೌಹಾರ್ದ ಸಹಕಾರಿ ಕಾಯ್ದೆಗೆ ಶೀಘ್ರವೇ ತಿದ್ದುಪಡಿ ಮಾಡಿಕೊಡಲು ಹಾಗೂ ತುರ್ತಾಗಿ ಸುಗ್ರಿವಾಜ್ಞೆಯನ್ನು ಹೊರಡಿಸಲು ಕೋರಲಾಗಿದೆ. ಈ ಸಂದರ್ಭದಲ್ಲಿ ಸಚಿವರುಗಳಾದ ಶ್ರೀ ಡಿ.ಕೆ. ಶಿವಕುಮಾರ, ಮತ್ತು ಶ್ರೀ ಕೃಷ್ಣಭೈರೇಗೌಡ ರವರು ಉಪಸ್ಥಿತರಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಹಕಾರ ಮಂತ್ರಿಗಳು ಒಪ್ಪಿದ್ದಾರೆ.

ನಂತರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ ರವರ ನೇತೃತ್ವದಲ್ಲಿ ಪ್ರವಾಸೋದ್ಯಮ ಸಚಿವರಾದ ಶ್ರೀ ಸಾ.ರಾ ಮಹೇಶ ಹಾಗೂ ಉನ್ನತ ಶಿಕ್ಷಣ ಸಚಿವ ಶ್ರೀ ಜಿ.ಟಿ. ದೇವೇಗೌಡರವರನ್ನು ಮತ್ತು ಪಶುಸಂಗೋಪನಾ ಸಚಿವರಾದ ಶ್ರೀ ವೆಂಕಟರಾವ್ ನಾಡಗೌಡ ಸೇರಿದಂತೆ ಅನೇಕ ಶಾಸಕರನ್ನು ಭೇಟಿಮಾಡಲಾಗಿದೆ. ವಿಧಾನ ಪರಿಷತ್ ಸದಸ್ಯ ಅರುಣ್ ಶಹಾಪುರ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ ರವರೊಡನೆ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಕಾಶ್ಯಂಪೂರ ರವರನ್ನು ಭೇಟಿ ಮಾಡಲಾಗಿದೆ. ಶ್ರೀಯುತರು ಅಧಿವೇಶನ ಮುಗಿದ ನಂತರ ಸುಗ್ರಿವಾಜ್ಞೆ ಹೊರಡಿಸಲು ಕ್ರಮವಿಡುವುದಾಗಿ ತಿಳಿಸಿದ್ದಾರೆ. ನಂತರ ವಿಧಾನ ಪರಿಷತ್ ಸದಸ್ಯರಾದ ವೇಣುಗೋಪಾಲ ರವರೊಂದಿಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಆಗಿರುವ ಶ್ರೀ ಜಿ. ಪರಮೇಶ್ವರ ರವರನ್ನು ಭೇಟಿಮಾಡಿ ವಿನಂತಿಸಲಾಗಿದೆ. ಇದೇ ಸಮಯದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಯನೂರ ಮಂಜುನಾಥ ಉಪಸ್ಥಿತರಿದ್ದರು. ಮತ್ತು ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನ ಅಧ್ಯಕ್ಷರಾದ ಶ್ರೀ ಮಂಜುನಾಥ ಗೌಡರವರೊಂದಿಗೆ ಮಾನ್ಯ ಸಹಕಾರ ಸಚಿವರನ್ನ ಮತ್ತೊಮ್ಮೆ ಭೇಟಿ ಮಾಡಿ ಸುಗ್ರಿವಾಜ್ಞೆ ಹೊರಡಿಸಲು ಶ್ರೀಘ್ರದಲ್ಲಿ ಕ್ರಮವಿಡಬೇಕೆಂದು ವಿನಂತಿಸಲಾಗಿದೆ. ಮತ್ತು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾದ ಶ್ರೀಮತಿ ನಾಗಲಾಂಬಿಕಾದೇವಿ ರವರನ್ನು ಭೇಟಿ ಮಾಡಲಾಗಿದೆ. ಎಲ್ಲರೂ ಶೀಘ್ರದಲ್ಲಿಯೇ ಸುಗ್ರೀವಾಜ್ಞೆ ಹೊರಡಿಸಲು ಕ್ರಮವಿಡುವುದಾಗಿ ತಿಳಿಸಿದ್ದಾರೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಬಗ್ಗೆ ತಮ್ಮ ಒತ್ತಡವನ್ನು ಮನವಿಗಳ ಮೂಲಕ ಸಲ್ಲಿಸಿ ಸಹಕರಿಸಬೇಕಾಗಿ ಕೋರುತ್ತೇನೆ.

## ಕೇಂದ್ರದ ರಾಜ್ಯ ಹಣಕಾಸು ಸಚಿವರನ್ನು ಹಾಗೂ ಬಿಜೆಪಿ ಪಕ್ಷದ ಅಧ್ಯಕ್ಷ ಶ್ರೀ ಅಮಿತ ಶಾ ರವರ ಭೇಟಿ





ಬೆಂಗಳೂರಿನಲ್ಲಿ ಕೇಂದ್ರ ಸಚಿವ ಶ್ರೀ ಡಿ.ವಿ.ಸದಾನಂದಗೌಡರವರನ್ನು ಭೇಟಿಮಾಡಿ ವಿವರಣೆ ನೀಡಲಾಗಿದೆ.

ದಿನಾಂಕ 28.12.2018 ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಸಹಕಾರ ಭಾರತಿಯ ಪದಾಧಿಕಾರಿಗಳೊಂದಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ ಶ್ರೀ ಹೆಚ್.ವಿ.ರಾಜೀವ, ಚಾರ್ಟರ್ಡ ಅಕೌಂಟೆಂಟ್ ಶ್ರೀ ಮಧುಕರ ಹೆಗಡೆ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್‌ರವರನ್ನು ಒಳಗೊಂಡ ಸಂಯುಕ್ತ ಸಹಕಾರಿಯ ನಿಯೋಗ ಕೇಂದ್ರದ ಮಾನ್ಯ ಸಹಕಾರ ಸಚಿವರನ್ನು ರಾಜ್ಯ ಸಚಿವರನ್ನು ಹಾಗೂ ಬಿ.ಜೆ.ಪಿ ಪಕ್ಷದ ಅಧ್ಯಕ್ಷ ಶ್ರೀ ಅಮಿತ ಶಾ ರವರನ್ನು ಭೇಟಿಮಾಡಿ ವಿಷಯದ ಬಗ್ಗೆ ವಿವರ ನೀಡಲಾಗಿದೆ.

ಕೇಂದ್ರದ ಅನೇಕ ಸಂಸದರನ್ನು ಭೇಟಿಮಾಡಲಾಗಿದೆ. ಮನವಿ ಪತ್ರ ಸಲ್ಲಿಸಲಾಗಿದೆ.

ಕಾರ್ಯ ಸಾಧನೆಯಾಗುವವರೆಗೆ ಪ್ರಯತ್ನವನ್ನು ನಿಲ್ಲಿಸುವುದಿಲ್ಲ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ನಿಲುವು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿಲ್ಲ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಕ್ರಮದಿಂದಾಗಿ ಸಹಕಾರಿ ಕ್ಷೇತ್ರ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ಅಪಾಯದ ಅಂಚಿನಲ್ಲಿದೆ. ಈ ಬಗ್ಗೆ ತುರ್ತು ಕ್ರಮ ಅಗತ್ಯ ಎಂದು ವಿವರಣೆ ನೀಡಲಾಗಿದೆ. ಅಗತ್ಯ ಕ್ರಮವಿಡುವುದಾಗಿ ಈ ಎಲ್ಲ ಗಣ್ಯರೂ ಭರವಸೆ ನೀಡಿದ್ದಾರೆ.

# ಕಾನೂನು ಸಮರಕ್ಕೂ ಕ್ರಮ : ಆದಾಯ ತೆರಿಗೆ ಟ್ರಿಬ್ಯೂನಲ್‌ನಲ್ಲಿ ಮೇಲ್ಮನವಿ (ಅಪೀಲು) ಹಾಗೂ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿಗಳನ್ನು ಹಾಕುವುದು ಅವಶ್ಯಕ

ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಂದ ನೋಟೀಸು ಬರುತ್ತದೆ. ಸಹಕಾರಿಗಳು ವಿವರಣೆ ನೀಡಬೇಕಾಗುತ್ತದೆ. ಆದಾಯ ತೆರಿಗೆ ಇಲಾಖಾಧಿಕಾರಿಗಳಿಗೆ ಸಹಕಾರಿಗಳ ವಿವರಣೆ ಸಮಾಧಾನವಾಗದೆ ಇದ್ದಾಗ ಆದಾಯ ತೆರಿಗೆ ಪಾವತಿಸಲು ಆದೇಶ ಮಾಡುತ್ತಾರೆ.

ಈ ಸಂದರ್ಭದಲ್ಲಿ ಸಹಕಾರಿಗಳು ಆದಾಯ ತೆರಿಗೆ ಟ್ರಿಬ್ಯೂನಲ್‌ಗೆ ಮೇಲ್ಮನವಿ ಸಲ್ಲಿಸುವುದು ಅವಶ್ಯಕ. ಇದರ ಜೊತೆಯಲ್ಲಿ ರಾಜ್ಯ ಹೈಕೋರ್ಟನಲ್ಲಿ ರಿಟ್ ಪಿಟಿಶನ್ ಹಾಕುವುದು ಸಹ ಅಗತ್ಯ.

ಈಗಾಲೇ ಬೆಂಗಳೂರಿನ ಉದಯ ಸೌಹಾರ್ದ ಸಹಕಾರಿ, ವೆಂಕಟೇಶ್ವರ ಸೌಹಾರ್ದ ಸಹಕಾರಿ ಪಾವಗಡ ವಿವಿಧೊದ್ದೇಶ ಸೌಹಾರ್ದ ಸಹಕಾರಿ ಕೋಲಾರ, ವಾಸವಿ ಸೌಹಾರ್ದ ಸಹಕಾರಿ ಹೊಸಕೋಟೆ, ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಜಮಖಂಡಿ, ಪ್ರಗತಿ ಪಥ ಸೌಹಾರ್ದ ಸಹಕಾರಿ ನಿ ಕೊಪ್ಪಳ ಗಂಗಾಧರೇಶ್ವರ ಪತ್ತಿನ ಸಹಕಾರಿ ಗಂಗಾವತಿ, ಶುಖಪುರಿ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ಗಿಣಗೇರಾ, ಹೀಗೆ ಹಲವಾರು ಸಹಕಾರಿಗಳಿಗೆ ನೋಟೀಸು ಹಾಗು ಆದೇಶಗಳು ಜಾರಿಗಿವೆ. ಆದಾಯ ತೆರಿಗೆ ಇಲಾಖೆಯ ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಲು ಹಾಗೂ ರಾಜ್ಯ ಹೈಕೋರ್ಟನಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಲು ಕ್ರಮವಿಡಲಾಗಿದೆ. ನೋಟೀಸು ಹಾಗೂ ಆದೇಶಗಳು ಜಾರಿಯಾಗುವ ಎಲ್ಲ ಸೌಹಾರ್ದ ಸಹಕಾರಿಗಳು ತಪ್ಪದೇ ಶೀಘ್ರದಲ್ಲಿ ಮೇಲ್ಮನವಿ ಹಾಗೂ ರಿಟ್ ಅರ್ಜಿಸಲ್ಲಿಸಲು ಕ್ರಮವಿಡಲು ಕೋರಿದೆ.

**ಪ್ರತಿಕಾ ಗೋಷ್ಠಿಗಳು** : ಈ ಬಗ್ಗೆ ರಾಜ್ಯಾದ್ಯಂತ್ಯ ಪ್ರತಿಕಾ ಗೋಷ್ಠಿಗಳನ್ನು ನಡೆಸಿ ಆದಾಯ ತೆರಿಗೆ ಇಲಾಖೆಯವರು ಅನಗತ್ಯವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಗೊಂದಲ ಸೃಷ್ಠಿಸಿರುವುದನ್ನ ಸಾರ್ವಜನಿಕರ ಹಾಗೂ ಸರಕಾರದ ಗಮನ ಸಳೆಯುವ ಕ್ರಮವಿಡಲಾಗಿದೆ.

## ಆದಾಯ ತೆರಿಗೆ ಇಲಾಖೆಯ ನೋಟೀಸುಗಳ ಕುರಿತು ಸಹಕಾರಿ ಹಾಗೂ ಸರ್ಕಾರದ ಗಣ್ಯರಿಗೆ ಮನವಿ ಹಾಗೂ ಪತ್ರಿಕಾಗೋಷ್ಠಿ





ಮಾನ್ಯ ಕೇಂದ್ರ ಸಚಿವರಾದ ಸದಾನಂದ ಗೌಡ ಹಾಗೂ ರಾಜ್ಯಸಭಾ ಸದಸ್ಯರಾದ ಡಾ. ಪ್ರಭಾಕರ್ ಕೋರೆ ಅವರ ಭೇಟಿ



ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಖಾಶಂಪೂರ ಅವರ ಭೇಟಿ



ಮಾನ್ಯ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರ ಭೇಟಿ

# ಗಣ್ಯರಿಗೆ ಮನವಿ



ಮಾನ್ಯ ಪಶುಸಂಗೋಪನ ಸಚಿವ ಶ್ರೀ ವೆಂಕಟರಾವ್ ನಾಡಗೌಡ ಅವರ ಭೇಟಿ



ಮಾನ್ಯ ಉನ್ನತಶಿಕ್ಷಣ ಸಚಿವ ಶ್ರೀ ಜಿ.ಟಿ.ದೇವೇಗೌಡ ಅವರ ಭೇಟಿ



ವಿಧಾನ ಪರಿಷತ್ತಿನ ಸದಸ್ಯರು ಮತ್ತು ಯಶಸ್ವಿನಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಶ್ರೀ ವೇಣುಗೋಪಾಲ ರವರ ಭೇಟಿ



ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠರವರ ಭೇಟಿ



ಪತ್ರಿಕಾಗೋಷ್ಠಿ, ಬೆಂಗಳೂರು




ಪತ್ರಿಕಾಗೋಷ್ಠಿ, ಕಲಬುರಗಿ




ಪತ್ರಿಕಾಗೋಷ್ಠಿ, ಮೈಸೂರು

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕ್ಯಾಲೆಂಡರ್, ಟೇಬಲ್ ಕ್ಯಾಲೆಂಡರ್ ಹಾಗೂ ಡೈರಿ ಯನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಬಂಡೆಪ್ಪ ಖಾಶಂಪೂರ ರವರು ಬಿಡುಗಡೆ ಮಾಡಿದರು






## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ವಿಭಾಗೀಯ ಕಛೇರಿಗಳಲ್ಲಿ 19ನೇ ಸೌಹಾರ್ದ ಸಹಕಾರಿ ದಿನಾಚರಣೆ

19ನೇ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ ಹಾಗೂ ಮೈಸೂರು ವಿಭಾಗದಲ್ಲಿ, ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.

## ಸಹಕಾರಿ ಧ್ವಜಾರೋಹಣ ಕಾರ್ಯಕ್ರಮ


ಕೇಂದ್ರ ಕಛೇರಿ


ಕಲಬುರಗಿ ಪ್ರಾಂತೀಯ ಕಛೇರಿ


ಮೈಸೂರು ಪ್ರಾಂತೀಯ ಕಛೇರಿ


ಬೆಳಗಾವಿ ಪ್ರಾಂತೀಯ ಕಛೇರಿ



ರಾಯಚೂರು ಜಿಲ್ಲಾ ಸಂಪರ್ಕ ಕಛೇರಿ



ಗದಗ ಜಿಲ್ಲಾ ಸಂಪರ್ಕ ಕಛೇರಿ



ಮಂಡ್ಯ ಜಿಲ್ಲಾ ಸಂಪರ್ಕ ಕಛೇರಿ



ವಿಜಯಪುರ ಜಿಲ್ಲಾ ಸಂಪರ್ಕ ಕಛೇರಿ



ಧಾರವಾಡ ಜಿಲ್ಲಾ ಸಂಪರ್ಕ ಕಛೇರಿ



ಉತ್ತರ ಕನ್ನಡ ಜಿಲ್ಲಾ ಸಂಪರ್ಕ ಕಛೇರಿ



ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿ



ಹಾಸನ ಜಿಲ್ಲಾ ಸಂಪರ್ಕ ಕಛೇರಿ

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ



ಬೆಂಗಳೂರು : ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮುನಿರೆಡ್ಡಿ ಹಾಗೂ ಆಡಳಿತ ಮಂಡಲಿ ಸದಸ್ಯರು ಧ್ವಜರೋಹಣವನ್ನು ನೇರವೇರಿಸಿದರು.



ಚಿತ್ರದುರ್ಗ : ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



ಬೆಂಗಳೂರು : ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



ಸಿರವಾರ : ಸಿರಿಸಂಜೀವಿನಿ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಚುಕ್ಕಿ ಸೂಗಪ್ಪ ಸಹುಕಾರ ರವರು ಧ್ವಜರೋಹಣ ಮಾಡುವುದರ ಮೂಲಕ ಆಚರಿಸಲಾಯಿತು.



ಹಾನಗಲ್ಲ : ಆದಿಶಕ್ತಿ ಸೌಹಾರ್ದ ಸಹಕಾರಿ ನಿ., ಹಾನಗಲ್ಲ ಸಹಕಾರಿಯು ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರು ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಉಡುಪಿ :** ಕರಾವಳಿಯ ಮೀನುಗಾರರ ಸಮಸ್ಯೆಗಳಿಗೆ ರಾಜ್ಯ ಸರಕಾರ ಸಕಾರಾತ್ಮವಾಗಿ ಸ್ಪಂದಿಸುತ್ತಿಲ್ಲ. ಮಲ್ಪೆ ಬಂದರಿನಿಂದ ಮೀನುಗಾರಿಕೆಗೆ ತೆರಳಿದ್ದ ಬೋಟ್ ಸಮೇತ 7ಮಂದಿ ಮೀನುಗಾರರು ನಾಪತ್ತೆಯಾಗಿದ್ದರೂ ಕೂಡಾ ಯಾವುದೇ ರೀತಿಯಲ್ಲಿ ನೆರವು ಸಿಕ್ಕಿಲ್ಲ. ರೈತರ ಆತ್ಮಹತ್ಯೆಯಂತಹ ಪ್ರಕರಣಗಳಲ್ಲಿ ಶೀಘ್ರವಾಗಿ ಸ್ಪಂದಿಸುವ ಸರಕಾರ ಮೀನುಗಾರರ ರಕ್ಷಣೆಗೂ ಕೂಡಾ ಜವಾಬ್ದಾರಿವಹಿಸಬೇಕು ಎಂದು ದ.ಕ. ಮತ್ತು ಉಡುಪಿ ಜಿಲ್ಲಾ ಮೀನುಮಾರಾಟ ಫೆಡರೇಶನ್ ಅಧ್ಯಕ್ಷ ಯಶ್‌ಪಾಲ್ ಎ.ಸುವರ್ಣ ತಿಳಿಸಿದ್ದಾರೆ.

ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಉಡುಪಿ ಮೀನು ಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ವತಿಯಿಂದ ನಡೆದ ಸಹಕಾರಿ ಸದಸ್ಯರಿಗಾಗಿ ನಡೆದ ಬ್ಯಾಂಕಿಂಗ್ ಮಾಹಿತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಮೀನುಗಾರಿಕೆ ಮತ್ತು ಕೃಷಿಯನ್ನು ಒಂದೇ ಸಚಿವಾಲಯದಲ್ಲಿ ಸೇರ್ಪಡೆಗೊಳಿಸಿದ್ದರೂ ಕೂಡಾ ಸರಕಾರ ತಾರತಮ್ಯ ನೀತಿ ತೋರಿಸುತ್ತಿದೆ. ಮೀನುಗಾರಿಕಾ ವಲಯದ ಅಭಿವೃದ್ಧಿ ಹಾಗೂ ಮೀನುಗಾರರ ಶ್ರೇಯೋಭಿವೃದ್ಧಿಗಾಗಿ ಪ್ರತ್ಯೇಕ ಮೀನುಗಾರಿಕಾ ಸಚಿವಾಲಯ ರೂಪುಗೊಳ್ಳಬೇಕಿರುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಅನಿವಾರ್ಯವೆನಿಸಿದೆ ಎಂದರು.

ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ಫೆಡರೇಶನ್ ಉಡುಪಿ ಜಿಲ್ಲಾ ನಿರ್ದೇಶಕ ಮಂಜುನಾಥ್ ಎಸ್.ಕೆ. ಮಾತನಾಡಿ ಸಹಕಾರಿ ರಂಗದಲ್ಲಿ ಮೀನುಗಾರರ ಪಾತ್ರ ಪ್ರಮುಖವಾಗಿದ್ದು, ಸಹಕಾರ ತತ್ವದಡಿ ಬಹುತೇಕ ಮೀನುಗಾರಿಕಾ ಚಟುವಟಿಕೆಗಳು ನಡೆಯುತ್ತಿರುವುದರಿಂದ ಆರ್ಥಿಕ ವಹಿವಾಟುಗಳು ಪಾರದರ್ಶಕವಾಗಿ ನಡೆಯುತ್ತಿದೆ. ಮೀನುಗಾರರಲ್ಲಿ ಮೀಟರ್ ಬಡ್ಡಿ ಹಾವಳಿಯನ್ನು ತಡೆಯುವ ನಿಟ್ಟಿನಲ್ಲಿ ಮೀನುಮಾರಾಟಗಾರರ ಸೌಹಾರ್ದ ಸಹಕಾರಿ ಸಂಸ್ಥೆ ಮೀನು ಮಾರುಕಟ್ಟೆಗಳಿಗೆ ತೆರಳಿ ನೇರಸಾಲ ಯೋಜನೆಯನ್ನು ರೂಪಿಸಿ ಯಶಸ್ವಿಯಾಗಿದೆ ಎಂದರು.



ಬೆಂಗಳೂರು : ಜನನಿಧಿ ಸೌಹಾರ್ದ ಸಹಕಾರಿ ನಿ., ಬೆಂಗಳೂರುನಲ್ಲಿ 01-01-2019 ರಂದು ಸೌಹಾರ್ದ ಸಹಕಾರಿಗಳ ದಿನಾಚರಣೆಯನ್ನು ಆಚರಿಸಲಾಯಿತು.



ಚಾಮರಾಜನಗರ : ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರದಲ್ಲಿ 01-01-2019ರಂದು ಸೌಹಾರ್ದ ಸಹಕಾರಿಗಳ ದಿನಾಚರಣೆಯನ್ನು ಆಚರಿಸಲಾಯಿತು.

# ಆರ್ಥಿಕ ಕ್ಷೇತ್ರಕ್ಕೆ ಸಹಕಾರಿಗಳ ಕೊಡುಗೆ ಅಪಾರ – ಜ್ಯಾಂತಿಕರ

**ಬೀದರ :** ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ–2019 ಹಾಗೂ "ಸೌಹಾರ್ದ ಸಹಕಾರ ಶ್ರೀ" ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಬೀದರ ನಗರದ ಶಾರದ ರೂಡ್‌ಸೆಟ್, ಪ್ರತಾಪ ನಗರ ಬೀದರ ನಲ್ಲಿ ಜರುಗಿಸಲಾಯಿತ್ತು. ಸಹಕಾರಿಯ ಧ್ವಜಾರೋಹಣ ನೇರವೆರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತ್ತು.

ಈ ಸಂದರ್ಭದಲ್ಲಿ "ಸೌಹಾರ್ದ ಸಹಕಾರಿ ಶ್ರೀ" ಪ್ರಶಸ್ತಿಯನ್ನು ಜಿಲ್ಲೆಯ ಹಿರಿಯ ಸಹಕಾರಿಗಳಾದ ಶಿವಾನಂದ ಮಂಠಾಳಕರೆಯವರಿಗೆ ಪ್ರಧಾನ ಮಾಡಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಮಹಾಮಂಡಳದ ರಾಜ್ಯ ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ ಅವರು ಮಾತನಾಡುತ್ತ ದೇಶದಲ್ಲಿ ಸಹಕಾರ ಚಳುವಳಿಗೆ 110 ವರ್ಷದಗಳ ಇತಿಹಾಸ ಹೊಂದಿದ್ದರು ಸಹ ಅಪೇಕ್ಷೇ ಪಟ್ಟಂತೆ ಸಹಕಾರ ಚಳುವಳಿ ಬೆಳವಣಿಗೆ ಹೊಂದಿಲ್ಲ ಆದರೆ ಇಂದಿಗೆ 18 ವರ್ಷಗಳ ಹಿಂದೆ ಜಾರಿಗೆ ಬಂದ ಸೌಹಾರ್ದ ಕಾಯ್ದೆಯ ಅಡಿಯಲ್ಲಿ ರಚಿವಾದ ಸೌಹಾರ್ದ ಸಹಕಾರಿಗಳಿಂದ ಇಂದು ರಾಜ್ಯದಲ್ಲಿ 4500 ಕ್ಕಿಂತ ಅಧಿಕ ಸೌಹಾರ್ದ ಸಹಕಾರಿಗಳು ರಾಜ್ಯದಲ್ಲಿ ತಕ್ಕ ಮಟ್ಟಿಗೆ ಮೀಟರ ಬಡ್ಡಿಗೆ ಕಡಿವಾಣ ಹಾಕುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಲು ಹೆಮ್ಮೆವಿದೆ. ಇಂದು ಸಹಕಾರಿಗಳು ಸರಕಾರ ಮಾಡದ ಕೆಲಸ ಕಾರ್ಯಗಳು ನಿರ್ವಹಿಸುತ್ತಿರುವುದು ಸಂತೋಷಕರಾವಾದ ವಿಷಯವೆಂದು ಹೇಳಿದರು. ಸಹಕಾರಿ ರಂಗವು ಆರ್ಥಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತೀದೆ. ಹಿಂದಿನ ಕಾಲದಿಂದಲು ಸಹಕಾರ ಒಂದು ಅವಿಭಾಜ ಅಂಗ ಜನರು ತಮ್ಮ ಬೇಕು ಬೇಡಿಕೆಗಳನ್ನು ಸಹಕಾರ ಸಂಸ್ಥೆಗಳ ಮೂಲಕವೇ ಇಡೇರಿಸಿಕೊಳ್ಳುತ್ತಿದರು. ಇಂದು ಸಹಕಾರಿಗಳನ್ನು ಬೇರೆ ದೃಷ್ಟಿಯಿಂದ ನೋಡುತ್ತಿರುವುದು ದುರಂತವಾಗಿದೆ. ಇಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರಂತರವಾಗಿ ಸಹಕಾರಿಗಳ ಮೇಲೆ ದಬ್ಬಾಳಿಕೆ ನಡೆಸುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು. ಬೀದಿ ವ್ಯಾಪಾರಿಗಳಿಗೆ ಕುಲಿ ಕಾರ್ಮಿಕರಿಗೆ ಸ್ವ ಸಹಾಯ ಸಂಘಗಳ ಮಹಿಳೆಯರಿಗೆ, ಬಡವರಿಗೆ ಸಹಕಾರಿಗಳ ಮೂಲಕ ಸಾಲ ಸೌಲಭ್ಯಗಳನ್ನು ನೀಡಿ ಅವರನ್ನು ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಸಹಕಾರಿಗಳು ಅನುಕುಲವಾಗಿದೆ ಎಂದರು.

ಕಾರ್ಯಕ್ರಮವನ್ನು ಹಿರಿಯ ಸಹಕಾರಿ ಹಾಗೂ ಸಿದ್ಧಾರೂಡ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಬಸವರಾಜ ಜಾಬಶೆಟ್ಟಿ ಉದ್ಘಾಟಿಸಿದರು ಬೀದರ ಜಿಲ್ಲೆಯು ಸಹಕಾರಿಗಳ ತವರೂರು ಇಲ್ಲಿಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಇಡಿ ರಾಜ್ಯಕ್ಕೆ ಮಾದರಿಯಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಸೌಹಾರ್ದ ಚಳುವಳಿಯನ್ನು ಉತ್ತಮವಾಗಿ ಕಾರ್ಯನಿರ್ವಹಿತ್ತಿರುವುದು ಹರ್ಷದ ವಿಷಯವಾಗಿದೆ.



ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಹಾಗೂ ರೇಣುಕ ಮಹೇಶ್ವರಿ ಪತ್ತಿನ ಸೌಹಾರ್ದ ಸಹಕಾರಿಯ 2019ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತ್ತು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಹಕಾರಿ ರಾಜಶೇಖರ ನಾಗಮೂರ್ತಿ ವಹಿಸಿದರು ವೇದಿಕೆ ಮೇಲೆ ಒಕ್ಕೂಟದ ಡಾ. ಅಶೋಕ ನಾಗೂರೆ, ಸಂಯುಕ್ತ ಸಹಕಾರಿ ನಿರ್ದೇಶಕರಾದ ಸಂಜೀವ ಮಹಾಜನ, ಎಸ್ ಎಸ್ ಪಾಟೀಲ್ ಸಂಯುಕ್ತ ಸಹಕಾರಿಯ ರಾಜಶೇಖರ ಎಚ್ ಉಪಸ್ಥಿತರಿದ್ದರು. ಮೊದಲಿಗೆ ಪ್ರಾರ್ಥನೆಯನ್ನು ಸಹಕಾರಿಗಳಾದ ವಿಜಯಲಕ್ಷ್ಮಿ ಮತ್ತು ಚಂದ್ರಯ್ಯಾ ಮಠಪತಿ, ಸ್ವಾಗತವನ್ನು ಒಕ್ಕೂಟದ ಉಪಾಧ್ಯಕ್ಷರಾದ ಸಂಜುಕುಮಾರ ಪಾಟೀಲ, ವಂದನಾರ್ಪಣೆಯನ್ನು ಶ್ರೀಕಾಂತ ಸ್ವಾಮಿ ಹಾಗೂ ನಿರೂಪಣೆಯನ್ನು ಅಚ್ಚುಕಟ್ಟಾಗಿ ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ ನಿರ್ವಹಿಸಿದರು ಈ ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕರಗಳಾದ ಜಗನಾಥ ಕರಂಜೆ, ಕ್ರಾಂತಿಕುಮಾರ ಕುಲಾ, ಸಮಜಯ ಕ್ಯಾಸಾ, ನಂದಾವಿವೇಕಾನಂದ, ಬಸವರಾಜ ಬುಧೆರಾ, ಸವಿತಾ ಜಿ ಕೆ, ಮಾಯವತಿ ಅಮೃತ ಹೊಸಮನಿ ಸೇರಿದಂತೆ ಜಿಲ್ಲೆಯ ನೂರಾರು ಸೌಹಾರ್ದ ಸಹಕಾರಿಗಳು ಭಾಗವಹಿಸಿದರು.



ಕೊಪ್ಪಳ : ದಿನಾಂಕ 01.01.2019 ರಂದು ಶ್ರೀ ಗುರು ಸೃಷ್ಠಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಗಿಣಿಗೇರಾ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾಯಕ್ರಮವನ್ನು ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ನೆರವೇರಿಸಿದರು.



ಬೆಂಗಳೂರು : ಸಹಜನ್ಯ ವಿವಿದೋದ್ದೇಶ ಸೌಹಾರ್ದ ಕೋ–ಆಪರೇಟಿವ್ ಲಿ., ಬೆಂಗಳೂರು ದಿನಾಂಕ 01.01.2019ನೇ ಮಂಗಳವಾರದಂದು ಸೌಹಾರ್ದ ಸಹಕಾರಿಯ ದಿನಾಚರಣೆಯನ್ನು ಆಚರಿಸಲಾಯಿತು.



**ಬೆಳಗಾವಿ :** ಅರಿಹಂತ ಅರ್ಬನ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿಯಲ್ಲಿ 01-01-2019 ರಂದು ಸೌಹಾರ್ದ ಸಹಕಾರಿಗಳ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಾಯಪ್ಪಾ ಹೊಳೆಪ್ಪ ಹೊಳೆಪ್ಪಗೋಳ ಅವರು ಸಹಕಾರಿ ಧ್ವಜ ಹಾರಿಸಿ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ಕಾರ್ಯ ಕೆಲಸಗಳ ಬಗ್ಗೆ ಸಮಾಜದ ಕೆಳಮಟ್ಟದ ಜನರಿಗೆ ತಲುಪಿಸಿ ಅದರ ಅರಿವು ಅವರಿಗೆ ಮೂಡಿಸಬೇಕು ಮತ್ತು ಸಹಕಾರಿಗಳ ಕೆಲಸ ಸ್ಮಾರ್ಟ ಮತ್ತು ವೇಗವಾಗಿ ಜನರಿಗೆ ತಲುಪಿಸಿ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಮ್ಮ ಸಹಕಾರಿಯ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಹಾಗೂ ಪ್ರಧಾನ ಕಾರ್ಯದರ್ಶಿಯವರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

**ಬೆಳಗಾವಿ :** ಕಿತ್ತೂರ ರಾಣಿ ಚನ್ನಮ್ಮ ಅರ್ಬನ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೈಲಹೊಂಗಲ ಇದರ ಸಂಸ್ಥಾಪನಾ ದಿನಾಚರಣೆ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಡಾ॥ ವ್ಹಿ. ಎಸ್. ಸಾಧುನವರ ವಹಿಸಿದ್ದರು. ಸಮಾರಂಭದಲ್ಲಿ ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಗುರುಪುತ್ರಪ್ಪ ಹೊಸಮನಿ, ಉಪಾಧ್ಯಕ್ಷರಾದ ಪಾರಿಸಪ್ಪ ಭಾವಿ ಮತ್ತು ತಾಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಬಸವರಾಜ ಮೂಗಿ ಹಾಗೂ ಅಕ್ಕಮಹಾದೇವಿ



ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಾದ ಶ್ರೀ ಚಂದ್ರಶೇಖರ ಗಣಾಚಾರಿ ಇವರನ್ನು ಹೃತ್ಪೂರ್ವಕವಾಗಿ ಸನ್ಮಾನಿಸಲಾಯಿತು ಹಾಗೂ ಸಹಕಾರಿಯ 2019ನೇ ಸಾಲಿನ ದಿನದರ್ಶಿಕೆಯನ್ನು ಬಿಡುಗಡೆ ಮಾಡಲಾಯಿತು.

## ರಕ್ತದಾನ ಶಿಬಿರ

**ಚಿತ್ರದುರ್ಗ :** ಸೌಹಾರ್ದ ಸಹಕಾರಿ ದಿನಾಚರಣೆಯ ಪ್ರಯುಕ್ತ ದಿನಾಂಕ 01-01-2019ನೇ ಮಂಗಳವಾರದಂದು ನಗರದ ಮರ್ಚೆಂಟ್ಸ್ ಬ್ಯಾಂಕ್‌ನಲ್ಲಿ ಬ್ಯಾಂಕಿನ ನಿರ್ದೇಶಕರು ಮತ್ತು ಸಿಬ್ಬಂದಿಗಳಿಂದ ರಕ್ತದಾನ ಶಿಬಿರ ಮತ್ತು ಬ್ಯಾಂಕಿನ ಗ್ರಾಹಕರಿಗೆ ಸಿಹಿ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ರಕ್ತದಾನ ಶಿಬಿರದಲ್ಲಿ 16 ಜನ ರಕ್ತದಾನ ಮಾಡಿದರು. ರಕ್ತದಾನ ಶಿಬಿರದಲ್ಲಿ



ಬ್ಯಾಂಕಿನ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಹಕಾರ ರತ್ನ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಎನ್.ಜಯ್ಯಣ್ಣ, ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ, ಶ್ರೀ ಜಿ.ರಾಜಾನಾಯ್ಕ್, ಶ್ರೀಮತಿ ಎಸ್.ಎಂ.ಉಷಾ ಮತ್ತು ಶ್ರೀ ಎ.ಸುಮಂತ್ ಭಾಗವಹಿಸಿದ್ದರು. ಸೌಹಾರ್ದ ಸಹಕಾರಿ ದಿನಾಚರಣೆಯ ಸಂದರ್ಭದಲ್ಲಿ ಬ್ಯಾಂಕಿನ ಗ್ರಾಹಕರಿಗೆ ಬ್ಯಾಂಕಿನ ಅಧ್ಯಕ್ಷರಿಂದ ಮತ್ತು ಆಡಳಿತ ಮಂಡಳಿ ಸದಸ್ಯರಿಂದ ಸಿಹಿ ವಿತರಿಸಲಾಯಿತು.



ಚಾಮರಾಜನಗರ : ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಸದರಿ ಸಹಕಾರಿಯು ಸೌಹಾರ್ದ ಸಹಕಾರಿಯ ದಿನಾಚರಣೆಯ ಅಂಗವಾಗಿ ಹಾವು ಕಚ್ಚಿದರೆ ಔಷಧಿ ಕೊಡುವ ನಾಟಿ ವೈದ್ಯರನ್ನು ಸನ್ಮಾನಿಸಲಾಯಿತು.



ಸಿರವಾರ : ವಿವೇಕ್ ಪತ್ತಿನ ಸೌಹಾರ್ದ ಸಹಕಾರಿ ನಿ. ಸಿರವಾರ. ದಿನಾಂಕ 01-01-2019 ರಂದು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರಿಯ ಸಂಸ್ಥಾಪಕರಾದ ಶ್ರೀ ಮಹೇಶ ಕೊಳ್ಳಿ ಧ್ವಜಾರೋಹಣ ಮಾಡುವ ಮುಖಾಂತರ ಆಚರಿಸಲಾಯಿತು ಹಾಗೂ ಸಹಕಾರಿಯ ಸದಸ್ಯರಿಗೆ ಉಡುಗೊರೆಯನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿವರ್ಗ ದವರು ಉಪಸ್ಥಿತರಿದ್ದರು



**ಬೆಲ್ಲದ ಬಾಗೇವಾಡಿ :** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ, ಬೆಲ್ಲದ ಬಾಗೇವಾಡಿಯ ಪ್ರಧಾನ ಕಚೇರಿಯಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಮಹಾವೀರ ಪಾ. ಖೆಮಲಾಪೂರೆ ಇವರು ಧ್ವಜಾರೋಹಣ ಮಾಡುವುದರ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣ ಸಮಯದಲ್ಲಿ ಬ್ಯಾಂಕಿನ ಎಲ್ಲ ಆಡಳಿತ ಮಂಡಳಿ ಸದಸ್ಯರು, ಆಡಳಿತ ಸಲಹೆಗಾರರು, ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿ ವರ್ಗದವರು ಆಡಳಿತ ಸಲಹೆಗಾರ ಮತ್ತು ಪ್ರಧಾನ ವ್ಯವಸ್ಥಾಪಕರೊಂದಿಗೆ ಬ್ಯಾಂಕಿನ ಗ್ರಾಹಕರಿಗೆ / ಸದಸ್ಯರಿಗೆ ಸಿಹಿ ಹಂಚುವ ಮೂಲಕ ಸೌಹಾರ್ದ ಸಹಕಾರ ದಿನಾಚರಣೆಯನ್ನು ಆಚರಿಸಿ ನಾಡಿನ ಸಮಸ್ತ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ದಿನಾಚರಣೆಯ ಶುಭ ಕೋರಲಾಯಿತು.

**ಬೆಂಗಳೂರು :** ಬೆಂಗಳೂರು ಸೌಹಾರ್ದ ಸಹಕಾರಿ ನಿಯಮಿತ, ಚಂದಾಪುರ ಇದರ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ. ಚಿನ್ನಪ್ಪ ವೈ ಚಿಕ್ಕಹಾಗಡೆ, ನಿರ್ದೇಶಕರಾದ ಕೆ. ಮಹೇಶ್, ಎಸ್ ನಾಗರಾಜ್, ದೇವರಾಜ ನಾಯಕ್ ಆರ್, ಕೆ. ಲೋಕೇಶ್, ಕಾರ್ಯನಿರ್ವಾಹಕ ಅಧಿಕಾರಿ ಪಿ. ಶುಭ ಅರಸ್ ಭಾಗವಹಿಸಿದ್ದರು.





ಕೊಡಗು ಸೌಹಾರ್ದ ಪತ್ತಿನ ಸಹಕಾರಿಯಿಂದ
ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ – ಮಡಿಕೇರಿ

## ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಸೌಹಾರ್ದ ಸಹಕಾರಿಗಳು ಚುನಾವಣೆ ಕುರಿತು ಚುನಾವಣಾ ಪ್ರಾಧಿಕಾರ ನೀಡಿರುವ ಸುತ್ತೋಲೆಗಳನ್ನು ಗಮನಿಸಿ ಅಗತ್ಯ ಕ್ರಮವಿಡಲು ಸೂಚಿಸಿದೆ.

ಸುತ್ತೋಲೇಗಳನ್ನು ಸ್ವಾಭಿಮಾನಿ ಸಹಕಾರಿ ನವೆಂಬರ್ ಮಾಹೆಯ ಪುಟ ಸಂಖ್ಯೆ 18 ರಿಂದ 29 ರವರೆಗೆ ಪ್ರಕಟಿಸಿದೆ.

## ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

### ಜಿಎಸ್‌ಟಿ ನೋಂದಣಿ ಹಾಗೂ ಆದಾಯ ತೆರಿಗೆ ರಿಟರ್ನ್ ಸಲ್ಲಿಕೆಯ ಕುರಿತು

**ಜಿಎಸ್‌ಟಿ ನೋಂದಣಿ ಹಾಗೂ ಜಿಎಸ್‌ಟಿ ರಿಟರ್ನ್ ಸಲ್ಲಿಕೆ :** ದಿನಾಂಕ 01 ಜುಲೈ 2017ರಿಂದ ಜಾರಿಗೊಂಡಿರುವ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯು ಸೌಹಾರ್ದ ಸಹಕಾರಿಗಳಿಗೂ ಅನ್ವಯಿಸುತ್ತದೆ. ಯಾವುದೇ ಸಹಕಾರಿಯ ಒಟ್ಟೂ ವಹಿವಾಟು (ಆದಾಯ) ರೂ.20/–ಲಕ್ಷ ಮೀರಿದ್ದರೆ ಅಂತಹ ಸಹಕಾರಿಯು ಸರಕು ಮತ್ತು ಸೇವೆಗಳ ಅಧಿನಿಯಮ,2017ರಡಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ನಿಯಮಿತವಾಗಿ ಜಿಎಸ್‌ಟಿ ರಿಟರ್ನ್ ಸಲ್ಲಿಕೆಯನ್ನು ಮಾಡಬೇಕಾಗುತ್ತದೆ.

**ನಾಮಮಾತ್ರ ಸದಸ್ಯರು ಹಾಗೂ ಸಹಸದಸ್ಯರೊಂದಿಗೆ ವ್ಯವಹಾರ :** ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರೊಂದಿಗೆ ಮಾಡುವ ಕ್ರೆಡಿಟ್ ಹಾಗೂ ಬ್ಯಾಂಕಿಂಗ್ ವ್ಯವಹಾರದಿಂದ ಗಳಿಸುವ ಆದಾಯಕ್ಕೆ, ಆದಾಯ ತೆರಿಗೆ ಕಲಂ.80ಪಿ(2)(ಎ)(i) ನಡಿಯಲ್ಲಿ ತೆರಿಗೆ ಕಡಿತಕ್ಕೆ ಅವಕಾಶ ಇದೆ. ಒಂದು ವೇಳೆ ಸೌಹಾರ್ದ ಕಾಯ್ದೆಯ ಪ್ರಾವಧಾನದಂತೆ ನಾಮಮಾತ್ರ ಸದಸ್ಯರು, ಸಹಸದಸ್ಯರೊಂದಿಗೆ ಹಾಗೂ ಪ್ಯಾನ್ ಕಾರ್ಡ್ ನೀಡುವುದು, ಇ ಸ್ಟಾಂಪಿಂಗ್ ಸೇವೆ ಸೇರಿದಂತೆ ಸದಸ್ಯೇತರರೊಂದಿಗೆ ವ್ಯವಹಾರಗಳನ್ನು ಮಾಡಿದಲ್ಲಿ, ಆ ಕಾರ್ಯಚಟುವಟಿಕೆಗಳಿಂದ ಬಂದ ಲಾಭಕ್ಕೆ ಆದಾಯ ತೆರಿಗೆ ಕಾಯ್ದೆಯನ್ವಯ ತೆರಿಗೆ ಪಾವತಿಸಬೇಕಾಗುತ್ತದೆ. ಸಹಕಾರಿಗಳು ಈ ಬಗ್ಗೆ ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು ಡಿಸೆಂಬರ್ ಮಾಹೆಯ ಸ್ವಾಭಿಮಾನಿ ಸಹಕಾರಿ ಪುಟ ಸಂಖ್ಯೆ 27 ಮತ್ತು 28ರಲ್ಲಿ ಪ್ರಕಟಿಸಿದೆ.

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ 20 ನೇ ತಂಡದ ತರಬೇತಿ ಸಮಾರೋಪ ಕಾರ್ಯಕ್ರಮ

## ತರಬೇತಿ ಶಿಬಿರಾರ್ಥಿಯ ಜೀವನ ಪುಸ್ತುಕದ ಮುನ್ನುಡಿ : ಎಸ್.ಆರ್. ಸತೀಶ್ಚಂದ್ರ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ 20 ನೇ ತಂಡದ ತರಬೇತಿಯು ದಿನಾಂಕ 06.12.2018 ರಂದು ಪ್ರಾರಂಭವಾಗಿ ದಿನಾಂಕ 15.12.2018 ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಯಶಸ್ವಿಯಾಗಿ ಮುಕ್ತಾಯವಾಯಿತು.

ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಕ್ಯಾಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರ ರವರು ಮಾತನಾಡಿ ಈ ತರಬೇತಿ ಕಳೆದ 10 ವರ್ಷಗಳಿಂದ ಯಶಸ್ವಿಯಾಗಿ ನಡೆದು ಬರುತ್ತಿರುವುದು ಪ್ರತಿ ತಂಡದಲ್ಲೂ ಭಾಗವಹಿಸಿದ ಶಿಬಿರಾರ್ಥಿಗಳು ಸಂಪನ್ಮೂಲ ವ್ಯಕ್ತಿಗಳು ತರಬೇತಿಯ ಬಗ್ಗೆ ಉತ್ತಮ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಿರುವುದು ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯ. ಈ ತರಬೇತಿ ಪ್ರತಿಯೊಬ್ಬ ಶಿಬಿರಾರ್ಥಿಯ ಜೀವನದ ಪುಸ್ತಕದಲ್ಲಿ ಮುನ್ನುಡಿಯನ್ನು ಬರೆಯುತ್ತದೆ. ಮುಂದಿನ ಪುಟಗಳನ್ನು ಶಿಬಿರಾರ್ಥಿಗಳು ಬರೆಯಬೇಕು. ಬರೆಯುವಾಗ



ಅವಶ್ಯಕವಾಗುವಾಗ ಮಾಹಿತಿ, ಜ್ಞಾನ, ಕೌಶಲ್ಯವನ್ನು ಈ ತರಬೇತಿ ನೀಡಿದೆ ಎಂದು ತಿಳಿಸಿದರು. ಈ 10 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅನೇಕರು ಬೇರೊಂದು ಸೌಹಾರ್ದ ಸಹಕಾರಿಯನ್ನು ಹುಟ್ಟುಹಾಕಿದ್ದಾರೆ. ಅವರಲ್ಲಿ ನಾಯಕತ್ವ ಬೆಳೆದಿದೆ. ಒಬ್ಬರು ಸಂಯುಕ್ತ ಸಹಕಾರಿಯ ನಿರ್ದೇಶಕರೂ ಆಗಿದ್ದಾರೆ ಇದು ಹೆಮ್ಮೆಯ ವಿಷಯ ಎಂದರು.

## ಕಾರ್ಯಕ್ರಮದ ಯಶಸ್ಸು ಶಿಬಿರಾರ್ಥಿಗಳ ಭಾಗವಹಿಸುವಿಕೆಯಿಂದ ಸಾಧ್ಯ : ಬಿ.ಹೆಚ್. ಕೃಷ್ಣಾರೆಡ್ಡಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಶಿಬಿರಾರ್ಥಿಗಳ ಅನಿಸಿಕೆಗಳನ್ನು ಹಾಗೂ ಕಾರ್ಯಕ್ರಮದ ವರದಿಯನ್ನು ಗಮನಿಸಿದರೆ ಪ್ರತಿಸಲದಂತೆ ಈ ತರಬೇತಿಯೂ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ ಇದಕ್ಕೆ ಕಾರಣ ಶಿಬಿರಾರ್ಥಿಗಳ ಸಕ್ರೀಯ ಭಾಗವಹಿಸುವಿಕೆ.

ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿರುವುದಕ್ಕೆ ಹಾಗೂ ಪ್ರಯೋಜನ ಪಡೆದಿರುವುದಕ್ಕೆ ಅಭಿನಂದನೆಗಳನ್ನು ತಿಳಿಸಿದರು. ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ



ಸಹಕಾರಿಗಳ ಆರೋಗ್ಯಕರ ಬೆಳವಣಿಗೆಗಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇದುವರೆಗೆ ತರಬೇತಿ ಪಡೆದ ಅನೇಕ ಶಿಬಿರಾರ್ಥಿಗಳು ಸೌಹಾರ್ದ ಸಹಕಾರಿಗೆ ಆಸ್ತಿಯಾಗಿದ್ದಾರೆ. ಉತ್ತಮ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದು ಸ್ವಾಗತಾರ್ಹ ಎಂದರು. ಸ್ವಾಭಿಮಾನಿ ಸಹಕಾರಿ ಪತ್ರಿಕೆಯೂ ಸೇರಿದಂತೆ ಅನೇಕ ಪ್ರಕಟಣೆಗಳನ್ನು ಪ್ರಕಟಿಸಿ ಸಹಕಾರಿಗಳ ಜ್ಞಾನವೃದ್ಧಿಗೆ ನಿರಂತರ ಪ್ರಯತ್ನಿಸುತ್ತಿದೆ. ಇವೆಲ್ಲವುಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.



## ತರಬೇತಿಯಿಂದ ಜ್ಞಾನ ಅಭಿವೃದ್ಧಿ : ಪುಟ್ಟೇಗೌಡ

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿದ ನಿವೃತ್ತ ನ್ಯಾಯಾಧೀಶ ಹಾಗು ಶ್ರೀ ರಂಗಪಟ್ಟಣದ ಪ್ರಗತಿ ಪರಿವರ್ತನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪುಟ್ಟೇಗೌಡರವರು ಮಾತನಾಡಿ ಇದೂಂದು ಉತ್ತಮ ತರಬೇತಿ ಕಾರ್ಯಕ್ರಮವಾಗಿದೆ.

ಕೇವಲ ವಿಷಯಗಳ ಬಗ್ಗೆ ಮಾಹಿತಿ ನೀಡದೆ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಅನೇಕ ವಿಷಯಗಳನ್ನು ಅಳವಡಿಸಿ ಉತ್ತಮ ತರಬೇತಿ ನೀಡಿರುವುದು ಸಂತೋಷದ ವಿಷಯ. ತರಬೇತಿಯಿಂದ ಶಿಬಿರಾರ್ಥಿಗಳ ಜ್ಞಾನಾಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ಪ್ರಗತಿ ಶ್ಲಾಘನೀಯ : ಎನ್.ಚಂದ್ರಪ್ಪ



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷ ಶ್ರೀ ಎನ್.ಚಂದ್ರಪ್ಪರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ತರಬೇತಿ ಕಾರ್ಯಕ್ರಮಗಳು ಬಹಳ ಉತ್ತಮವಾಗಿ ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ ಇದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರನ್ನು ಹಾಗೂ ಅಧಿಕಾರಿಗಳನ್ನು ಅಭಿನಂದಿಸುತ್ತೇನೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್.ಗುಂಡೂರಾವರವರು, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಉಪನಿರ್ದೇಶಕ ಶ್ರೀ ಷಡಕ್ಷರಿಯವರು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಮುಕುಂದ ಪುಜಾರಿಯವರು ನಿರ್ವಹಿಸಿದರು. ಪ್ರಾರಂಭದಲ್ಲಿ ಶಿಬಿರಾರ್ಥಿಗಳು ಪ್ರಾರ್ಥನೆ, ಸಹಕಾರ ಗೀತೆ ಹಾಗೂ ನಾಡಗೀತೆಯನ್ನು ನಡೆಸಿಕೊಟ್ಟರು. ಶ್ರೀ ರಾಘವೇಂದ್ರ ಮಲ್ಲಿಕಾರ್ಜುನ ಪತ್ತಾರ ರವರು ಸ್ವಾಗತಿಸಿದರು. ಸಹಕಾರ ಅಭಿವೃದ್ಧಿ ಅಧಿಕಾರಿ ಶ್ರೀ ಕೆ.ಎಮ್.ರಾಜೇಶರವರು ಶಿಬಿರದ ವರದಿಯನ್ನು ಓದಿದರು. ನಂತರ ಶಿಬಿರಾರ್ಥಿಗಳು ತಮ್ಮ ಅನಿಸಿಕೆಯನ್ನು ತಿಳಿಸಿದರು.



ಯೋಗ ಶಿಕ್ಷಣ




ಸಂವಾದ ಕಾರ್ಯಕ್ರಮ

ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳಿಗೆ ಪ್ರತಿದಿನ ಬೆಳಿಗ್ಗೆ ಯೋಗ ಶಿಕ್ಷಣ, ಸಭೆಗಳ ಹಾಗು ಲೆಕ್ಕ ಪತ್ರಗಳ ನಿರ್ವಹಣೆ. ಸಹಕಾರಿಯಲ್ಲಿ ಕ್ರಿಯಾಯೋಜನೆ ಸಿದ್ದಪಡಿಸುವುದು ಬಗ್ಗೆ ಪ್ರಾಯೋಗಿಕ, ಉತ್ತಮ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳ ಜೊತೆಗೆ ಸಂವಾದ, ಹಣಕಾಸಿನ ಸ್ಥಿತಿಗತಿಗಳನ್ನು ಅರಿಯುವ ಬಗ್ಗೆ ಪ್ರಾಯೋಗಿಕ, ಪ್ರತಿದಿನದ ವರದಿಗಳನ್ನು ಸಿದ್ಧಪಡಿಸುವುದು, ಅಧ್ಯಯನ ಪ್ರವಾಸದ ವರದಿಯನ್ನು ಸಿದ್ಧಪಡಿಸುವುದು, ಪ್ರತಿ ದಿನ ಸುವಿಚಾರಗಳನ್ನು ಹೇಳುವುದು, ನಿನ್ನೆಯ ಕಾರ್ಯಕ್ರಮಗಳ ಪುನರ್ಮನನ ಮಾಡುವುದು, ಅಲ್ಲದೇ ಶಿಬಿರಾರ್ಥಿಗಳಿಗಾಗಿ ಸಾಂಸ್ಕೃತಿಕ ಹಾಗು ಮನೋರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.



ಪ್ರಮಾಣ ಪತ್ರ ವಿತರಣೆ



ಬಹುಮಾನ ವಿತರಣೆ



ತಂಡದ ಬಹುಮಾನ ವಿತರಣೆ

ತರಬೇತಿಯ ಅವಧಿಯಲ್ಲಿ ಉತ್ತಮವಾಗಿ ಭಾಗವಹಿಸುವುದರ ಜೊತೆಗೆ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದ ಶಿಬಿರಾರ್ಥಿಗಳನ್ನು ಗುರುತಿಸಿ ಬಹುಮಾನ ವಿತರಿಸಲಾಯಿತು.

**ಉತ್ತಮ ಪ್ರಾರ್ಥನೆ :** ಶ್ರೀಮತಿ ವಿದ್ಯಾ ವಿನಯ, ಬೆಂಗಳೂರು

**ಉತ್ತಮ ಮಿಲಿ :** ಶ್ರೀ ಶಿವರಾಜ್ ಸಾವಳಗಿ, ಸಿದ್ದಸಿರಿ ಸೌಹಾರ್ದ ಸಹಕಾರಿ, ವಿಜಯಪುರ.

**ಉತ್ತಮ ಸುವಿಚಾರ :** ಶ್ರೀ ದಾವೂದಸಾಹೇಬ ದೊಡ್ಡಮನಿ ಹುಣಶ್ಯಾಳ, ವಿಜಯಪೂರ

**ಉತ್ತಮ ಇನಸ್ಟಂಟ ಮಿಲಿ ಕುಮಾರಿ :** ಮಾಲಾಶ್ರೀ, ಬೆಳಗಾವಿ

**ಉತ್ತಮ ವರದಿಗಳನ್ನು ಸಿಧ್ಧಪಡಿಸಿದ ತಂಡಗಳು :** ಶ್ರೀ ಸರಸ್ವತಿ ಹಾಗೂ ಗಂಗಾ ತಂಡಗಳು

**ಉತ್ತಮ ಉಟೂಪಚಾರ :** ಕೃಷ್ಣಾ ತಂಡ

**ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮ :** ಕಾವೇರಿ ತಂಡ

**ಉತ್ತಮ ಶಿಬಿರಾರ್ಥಿ ಪುರುಷರ ವಿಭಾಗ (ಶಿಬಿರಾರ್ಥಿಗಳ ಆಯ್ಕೆ) :** ಶ್ರೀ ಮುಕುಂದ ಪುಜಾರಿ

**ಉತ್ತಮ ಶಿಬಿರಾರ್ಥಿ ಮಹಿಳಾ ವಿಭಾಗ ವಿಭಾಗ (ಶಿಬಿರಾರ್ಥಿಗಳ ಆಯ್ಕೆ) :** ಕುಮಾರಿ ಸೌಮ್ಯ ಶೆಟ್ಟಿ

**ಉತ್ತಮ ಶಿಬಿರಾರ್ಥಿ ಸಂಯುಕ್ತ ಸಹಕಾರಿಯ ಆಯ್ಕೆ :**

**ಪುರುಷರ ವಿಭಾಗ :** ಶ್ರೀ ಮಾದನಶೆಟ್ಟಿ ವಿಜಯಪುರ ಶ್ರೀ ಅಶೋಕ ಬ್ಯಾಹಟ್ಟಿ ಅಳ್ಣಾವರ

**ಮಹಿಳಾ ವಿಭಾಗ :** ಶ್ರೀಮತಿ ಕುಸುಮ, ಶ್ರೀ ಶಾರದಾ ಬಾಯಿ ಹಾಗು ಶ್ರೀಮತಿ ಮಂಜುಳಾ

ಶಿಬಿರಾಥಿಗಳು ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಹಾಗೂ ಎಲ್ಲ ತರಬೇತಿಯ ಅಧಿಕಾರಿ ವರ್ಗದವರನ್ನು ಗೌರವಿಸಿದರು.

ತರಬೇತಿಯ ಅಂಗವಾಗಿ ಸಮಾರೋಪ ಕಾರ್ಯಕ್ರಮವನ್ನು ಶಿಬಿರಾರ್ಥಿಗಳಿಂದಲೆ ಎಲ್ಲ ವ್ಯವಸ್ಥೆಗಳನ್ನು ಮಾಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ರಾಜ್ಯದ 20 ಜಿಲ್ಲೆಗಳಿಂದ 54 ಸೌಹಾರ್ದ ಸಹಕಾರಿಗಳ 64 ಪ್ರತಿನಿಧಿಗಳು ಹಾಗೂ ಸಂಯುಕ್ತ ಸಹಕಾರಿಯ 2 ಪ್ರತಿನಿಧಿಗಳು ಸೇರಿದಂತೆ ಒಟ್ಟು 66 ಜನರು ಭಾಗವಹಿಸಿ ಪ್ರಯೋಜನ ಪಡೆದರು.

**ಶಿಬಿರದ ಕೊನೆಯಲ್ಲಿ ಮೌಲ್ಯಮಾಪನ (ಪರೀಕ್ಷೆ) ಏರ್ಪಡಿಸಲಾಯಿತು ಇದರಲ್ಲಿ ಪ್ರಥಮ ಬಹುಮಾನ ಜಯಶ್ರೀ, ಅಮೋಘ ಕರುನಾಡ ಪೂರ್ಣ ಸೇವಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು, ದ್ವಿತೀಯ ಬಹುಮಾನ ಆನಂದ ರುದ್ರಪ್ಪ ಪರಸಣ್ಣವರ, ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ, ತೃತೀಯ ಬಹುಮಾನ ಲಲಿತ ಕೆ. ಬಿರಾದಾರ, ವಾಸವಿ ಪತ್ತಿನ ಸೌಹಾರ್ದ ಸಹಕಾರಿ ನಿ., ವಿಜಯಪುರ ಇವರಿಗೆ ನೀಡಲಾಯಿತು.**

## ಉದ್ಘಾಟನಾ ಕಾರ್ಯಕ್ರಮ

ದಿನಾಂಕ : 6-12-2018 ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಅಧಿಕಾರಿ ಶ್ರೀ ಸಂಜಯ ಕೊರಟಕರ ರವರು ಸ್ವಾಗತಿಸಿದರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲರವರು ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ಇಳಂಗೋವನ್ ರವರು ಕಾರ್ಯಕ್ರಮ ಉದ್ಘಾಟಿಸಿದರು.



ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಎಸ್. ಗುಂಡೂರಾವರವರು ಉಪಸ್ಥಿತರಿದ್ದರು.




10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ 20ನೇ ತಂಡದ ಶಿಬಿರಾರ್ಥಿಗಳು

# 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ 20ನೇ ತಂಡದ ಶಿಬಿರಾರ್ಥಿಗಳ ಅನಿಸಿಕೆಗಳು

10 ದಿನಗಳ ವ್ಯಕ್ತಿತ್ವ ವಿಕಸನದಲ್ಲಿ ಒಂದು ಒಳ್ಳೆಯ ಅನುಭವ ಮತ್ತು ಇಲ್ಲಿ ಒಂದಷ್ಟು ಒಳ್ಳೆಯ ವಿಚಾರಗಳ ಅಳವಡಿಸಿಕೊಳ್ಳಲು ತುಂಬಾ ಸಹಕಾರಿಯಾಗಿದೆ. ಇದು ಹೀಗೆ ಮುಂದುವರಿಸುವಂತೆ ನಮ್ಮ ಅಭಿಪ್ರಾಯ. **– ಶ್ರೀ ಆನಂದ ಪರವಣ್ಣವರ, ಶ್ರೀ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು.**

ಈ ಹತ್ತು ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವು ಒಂದು ಕಿರು ವಿಶ್ವವಿದ್ಯಾಲಯದಲ್ಲಿ ಎಲ್ಲಾ ವಿಷಯ ಅನುಸಾರವಾಗಿ ಉನ್ನತ ವ್ಯಾಸಂಗ ಪಡೆದ ಉಪನ್ಯಾಸಕರಿಂದ ಉಪನ್ಯಾಸ ನೀಡಿ ಸಹಕಾರ ಕ್ಷೇತ್ರದಲ್ಲಿ ಉದ್ಯೋಯನ್ನುಖವಾಗಿ ಬೆಳೆಯುವುದಕ್ಕೆ ಒಂದು ದಾರಿ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. **– ಶ್ರೀ ಹಾಲೂರಪ್ಪ ಪೂಜಾರ, ಕಲೂಡ ದಾರಿ ದೀಪ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೂಡ್ಲಿಗಿ.**

ಬರುವಾಗ ಏನು ತರಲಿಲ್ಲ, ಆದರೆ ಹೆಮ್ಮೆಯಿಂದ ಹೇಳುತ್ತೇನೆ ಹೋಗುವಾಗ ವಿದ್ಯೆಯನ್ನು ತೆಗೆದುಕೊಂಡು ಹೋದೆ, ಗುರಿ ಇಲ್ಲದ ನನಗೆ ಗುರಿ ಕೊಟ್ಟ ಸಂಯುಕ್ತ ಸಹಕಾರಿ. **– ಶ್ರೀ ನಿತಿನ್, ಸುವಿಧ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಗರ.**

ಒಂದು ಉತ್ತಮವಾದ ಅನುಭವ ಮತ್ತು ಎಲ್ಲರ ಜೊತೆಯಲ್ಲಿ ಬರೆಯುವ ಅವಕಾಶ ದೊರೆಯುವಂತಾಗಿದೆ. **– ಶ್ರೀ ಸುರೇಶ ನಂದಾ, ಎಮ್. ಸಿಟಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ**

ಈ ತರಬೇತಿಯು ನನ್ನ ಜೀವನದ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಒಂದು ಒಳ್ಳೆಯ ವೇದಿಕೆಯಾಗಿದೆ ಮತ್ತು ಸೌಹಾರ್ದವನ್ನು ಬೆಳೆಸಲು ಪ್ರೇರಣೆಯಾಗಿದೆ. **– ಶ್ರೀ ಶಿವುಕುಮಾರ ಹ. ಬನ್ನೂರ, ಬಿಜಾಪುರ ತೋಟಗಾರಿಕಾ ಸೌಹಾರ್ದ ಸಹಕಾರಿ ನಿ., ಬಿಜಾಪುರ.**

10 ದಿನಗಳ ತರಬೇತಿಯಲ್ಲಿ ಎಲ್ಲಾ ಉಪನ್ಯಾಸಕರು ನಮ್ಮ ಮನ ಮುಟ್ಟುವಂತೆ ನೀಡಿದ್ದಾರೆ ಇವರಿಗೆ ನನ್ನ ವಂದನೆಗಳು. **– ಶ್ರೀ ದೀಪಕ ಎನ್, ಸೀತರಾಮ ಸೌಹಾರ್ದ ಸಹಕಾರಿ ನಿ.,**

ವಿಷಯವನ್ನು ನನ್ನ ಸಹಕಾರಿಯಲ್ಲಿ ರೂಢಿಸಿಕೊಳ್ಳುತ್ತೇನೆ ಎಂದು ಈ ಮೂಲಕ ತಿಳಿಸುತ್ತೇನೆ. ನನಗೆ ಈ ಶಿಬಿರದಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟ ತಮಗೆಲ್ಲ ಧನ್ಯವಾದಗಳು. **– ಶ್ರೀ ಸುದರ್ಶನ, ಕೆ.ಎಂ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,**

ಈ ತರಬೇತಿಯಲ್ಲಿ ವ್ಯಕ್ತಿತ್ವ ವಿಕಸನ ಜೊತೆಗೆ ತಮ್ಮನ್ನು ತಾವು ತಮ್ಮ ಸಹಕಾರಿಯಲ್ಲಿ ಯಾವ ರೀತಿ ತೊಡಗಿಸಬೇಕು ಎಂಬುದನ್ನು ಅರಿತುಕೊಂಡೆವು. **– ಶ್ರೀ ಲೋಕೇಶ ರಮೇಶ ನಾಯ್ಕ, ಶ್ರೀ ಮಹಾಗಣಪತಿ – ಮಹಾಸತಿ (ಎಂಜಿಎಂ) ಸೌಹಾರ್ದ ಪತ್ತಿನ ಸಹಕಾರಿ ನಿ., ಭಟ್ಕಳ.**

10 ದಿನಗಳ ವ್ಯಕ್ತಿತ್ವ ವಿಕಸನ ಹೊಂದಿ ಸಮಾಜದಲ್ಲಿ ಸಂಸ್ಥೆಯಲ್ಲಿ ಆರ್ಥಿಕವಾಗಿ, ಸಮಾಜಿಕವಾಗಿ, ಪ್ರಾಮಾಣಿಕವಾಗಿ ಸದೃಡವಾಗಿ ನಮಗೆ ಸ್ಫೂರ್ತಿದಾಯಕವಾಗಿ ಏಳಿಗೆ ಹೊಂದುವಂತೆ ಮಾಡುತ್ತದೆ. **– ಶ್ರೀ ಶಿವಶರಣ ಹೆಚ್, ವಿಶ್ವ ವಿನಾಯಕ ಮಹಿಳಾ ಸೌಹಾರ್ದ ಸಹಕಾರಿ ನಿ., ಯಾದಗಿರಿ.**

ಈ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿಯಿಂದ ಉತ್ತಮ ವ್ಯಕ್ತಿತ್ವವನ್ನು ಹಾಗೂ ಸಹಕಾರಿ ಕಾಯ್ದೆ, ಸಹಕಾರಿ ತತ್ವಗಳ ಬಗ್ಗೆ & ಪರಿಣಾಮಕಾರಿ ಸಂವಹನದ ಬಗ್ಗೆ ತಿಳಿದುಕೊಂಡೆವು. ಮುಖ್ಯವಾಗಿ ಈ ತರಬೇತಿಯಲ್ಲಿ ಉತ್ತಮ ವ್ಯಕ್ತಿತ್ವದ ಬಗ್ಗೆ ತಿಳಿದಿಕೊಂಡೆವು. **– ಶಿವಲೀಲ ಕೆ. ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು.**

ತರಬೇತಿಯು ವ್ಯಕ್ತಿತ್ವ ವಿಕಸನಗೊಳಿಸುವುದರ ಜೊತೆಗೆ ಪರಿಣಾಮಕಾರಿಯಾಗಿ ಸಹಕಾರಿ ಕ್ಷೇತ್ರದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಲು ಪೂರಕವಾಯಿತು. **– ಶ್ರೀ ಶ್ರೀಕಾಂತ ಕನ್ನ ನಾಯ್ಕ, ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಶಿರಸಿ.**

ಈ ತರಬೇತಿಯು ವ್ಯಕ್ತಿ ಮತ್ತು ವ್ಯಕ್ತಿತ್ವ ವಿಕಸನದ ಜೊತೆಗೆ ಉತ್ತಮ ಸಹಕಾರಿಯಾಗಲು ಉಪಕಾರಿಯಾಗಿದೆ. **– ಶ್ರೀ ಮುಕುಂದ ಪೂಜಾರ, ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ.**

ಉತ್ತಮವಾದ, ಅರ್ಥಪೂರ್ಣವಾದ ತರಬೇತಿಯಿಂದ ಅತ್ಯದ್ಭುತವಾದ ವ್ಯಕ್ತಿತ್ವವನ್ನು ಪಡೆದುಕೊಂಡೆನು. **– ಸೌಮ್ಯ ವಿಕ್ರಮ್ ಶೆಟ್ಟಿ, ಜನ್ಮಭೂಮಿ ಸ್ವಸಹಾಯ ಸೌಹಾರ್ದ ಸಹಕಾರಿ ನಿ., ಮಂಗಳೂರು.**

10 ದಿನಗಳ ವ್ಯಕ್ತಿತ್ವ ವಿಕಸನದಿಂದ ಸೌಹಾರ್ದ ಕಾಯ್ದೆ & ಕಾರ್ಯಕ್ರಮಗಳ ನಿರ್ವಹಣೆ ಬಗ್ಗೆ ಅಪಾರ ಅನುಭವ. **– ಶ್ರೀ ಮುತ್ತಪ್ಪ ಹುಲ್ಲಪ್ಪ ಬಿಂಗಿ, ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ಕುಷ್ಟಗಿ.**

ಸಮಗ್ರ ತರಗತಿಯಿಂದ ಸುಸ್ಥಿರತೆ ಸಹಕಾರಿ ನಿರ್ಮಾಣ. **– ಶ್ರೀ ಬಬ್ರುವಾಹನ, ಜೆಆರ್‌ಡಿಎಸ್ ಗ್ರಾಮೀನ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಳವಳ್ಳಿ.**

ಈ ತರಬೇತಿಯಿಂದ ನಮಗೆ ಉತ್ತಮವಾದ ವಿಷಯಗಳನ್ನು ತಿಳಿದುಕೊಳ್ಳಲು ಸಹಕಾರಿ ಆಯಿತು. **– ಶ್ರೀ ಎಮ್. ಎಸ್. ಮಂಜುನಾಥ, ಸೀತರಾಮ ಮಂದಿರಮ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು.**

ಈ ಹತ್ತು ದಿನಗಳ ತರಬೇತಿಯು ನನ್ನ ಉದ್ಯೋಗ ಜೀವನದಲ್ಲಿ ಒಂದು ಉತ್ತಮ ಮಟ್ಟಕ್ಕೆ ಪ್ರಗತಿ ಹೊಂದಲು ಬಹು ಉಪಕಾರಿಯಾಗಿದೆ. ನನ್ನಂತಹ ಹೊಸದಾಗಿ ಕೆಲಸಕ್ಕೆ ಸೇರಿದವರು ಉತ್ತಮ ರೀತಿಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಲು ಇಂತಹ ತರಬೇತಿಯು ಬಹು ಮುಖ್ಯವಾಗಿದೆ. **– ಶ್ರೀ ನವೀನ್ ವಿ, ವಾಸವಿ ವಿವಿದೋದ್ದೇಶ ಸೌಹಾರ್ದ** ಸಹಕಾರಿ ನಿ., ಕೊಳ್ಳೇಗಾಲ.

## ಆಡಳಿತ ಪರಿಣಿತಿ ತರಬೇತಿ



**ಉಡುಪಿ :** ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ಸದಸ್ಯರಿಗೆ ಆಯೋಜಿಸಿದ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಶ್ರೀ ಯಶ್‌ಪಾಲ ಎ ಸುವರ್ಣ ರವರು ಉದ್ಘಾಟಿಸಿದರು.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ಉಪಸ್ಥಿತರಿದ್ದರು. 45 ಸೌಹಾರ್ದ ಸಹಕಾರಿಗಳಿಂದ 90 ಪ್ರತಿನಿಧಿಗಳು ಭಾಗವಹಿಸಿದರು.

---

**ಕಲಬುರಗಿ :** ಸೌಹಾರ್ದ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಪ್ರಾಮಾಣಿಕ ಪಾರದರ್ಶಕ ಸೇವೆ ಅಗತ್ಯ, ಬದ್ಧತೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಅವುಗಳು ಉನ್ನತ ಮಟ್ಟಕ್ಕೆ ಕೊಂಡೊಯಲು ಸಾಧ್ಯ ಎಂದು ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ ಅಭಿಪ್ರಾಯಪಟ್ಟರು.

ಡಿಸೆಂಬರ್ 15,16 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿಯಿಂದ ಹಮ್ಮಿಕೊಂಡಿರುವ ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳ ಆಡಳಿತ ಪರಿಣಿತಿ ತರಬೇತಿಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಕೇಂದ್ರ, ರಾಜ್ಯ ಸರಕಾರಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ಸೇರಿ ಸಹಕಾರಿಗಳಿಗೆ ಹೊಸ ಕಾನೂನು ಕಾಯ್ದೆಗಳು ತರಲಾಗುತ್ತಿದೆ, ಇದರಿಂದ ಜನಸಾಮಾನ್ಯರಿಗೆ ತೊಂದರೆಯಾಗುವುದು ಸಹಜ ಎಂದು ಹೇಳಿದರು. ಅಧಿಕಾರಿಗಳ ಇಚ್ಛಾಶಕ್ತಿಯಿಂದ ಇವುಗಳು ಕುಂಟಿತವಾಗುತ್ತಿವೆ. ಆದ್ದರಿಂದ ಸಹಕಾರಿಯ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳು ಸೇರಿ ಜಾಗೃತರಾದರೆ, ಮಾತ್ರ ಮುಂದಿನ ದಿನಗಳಲ್ಲಿ ಸಂಸ್ಥೆಗಳು ಬೆಳವಣಿಗೆ ಹೊಂದಬಹುದು ಎಂದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಗಳ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಆರ್ ಕೆ ಪಾಟೀಲ್ ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ರೈತರಿಗೆ, ಕೂಲಿಕಾರ್ಮಿಕರಿಗೆ, ಬೀದಿ ವ್ಯಾಪಾರಿಗಳಿಗೆ, ಹೋಟಲ್, ಚಿಕ್ಕ ಚಿಕ್ಕ ಅಂಗಡಿಗಳಿಗೆ ಹಾಗೂ ಮಹಿಳೆಯರಿಗೆ, ಹಿಂದುಳಿದ ವರ್ಗದವರಿಗೆ ಹೆಚ್ಚಿನ ಪ್ರಮಾಣದಲ್ಲಿ ಅನೂಕೂಲವಾಗುವಂತೆ ಸೌಲಭ್ಯಗಳು ನೀಡುವುದರ ಮುಖಾಂತರ ಅವರ ಬೆಳವಣಿಗೆಗೆ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ್. ಶ್ರೀ ವೈ.ಟಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್, ಸಂಪನ್ಮೂಲ ವ್ಯಕ್ತಿಗಳಾದ ಸಿ ಎನ್ ಪರಶಿವಮೂರ್ತಿ ಹಾಗೂ ಪ್ರಾಂತೀಯ ಅಧಿಕಾರಿ ರಾಜಶೇಖರ ಎಚ್ ಹಾಜರಿದ್ದರು. ಮೊದಲಿಗೆ ಸ್ವಾಗತವನ್ನು ರಾಜಶೇಖರ ಎಚ್, ಪ್ರಾಸ್ತಾವಿಕ ನುಡಿ ಶರಣಗೌಡ ಜಿ ಪಾಟೀಲ್, ವಂದನಾರ್ಪಣೆಯನ್ನು ಕಾನೂನು ಅಧಿಕಾರಿ ಸೂರ್ಯಕಾಂತ ರ್‍ಯಾಕಲೆ ನೆರವೇರಿಸಿದರು.

ನಂತರ ಬೆಳಗ್ಗೆ 11.30 ರಿಂದ ಮಧ್ಯಾಹ್ನ 2.00 ಗಂಟೆವರೆಗೆ ಸೌಹಾರ್ದ



ಕಾಯ್ದೆ ಆಶಯ, ಮುಖ್ಯಾಂಶಗಳು ಹಾಗೂ ಆಡಳಿತ ಮಂಡಳಿ ಸದಸ್ಯರ ಜವಾಬ್ದಾರಿಗಳ ಕುರಿತು ಸಹಕಾರ ಇಲಾಖೆಯ ನಿವೃತ ಅಪರ ನಿಬಂಧಕರಾದ ಶ್ರೀ ಸಿ ಎನ್ ಪರಶಿವಮೂರ್ತಿರವರು ಕಾಯ್ದೆಯ ಕುರಿತು ಮಾಹಿತಿ ನೀಡಿದರು.

ಮಧ್ಯಾಹ್ನ 2.30 ರಿಂದ 5.00 ರವರೆಗೆ ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹಾಗೂ ವ್ಯವಹಾರಾಭಿವೃದ್ಧಿ ಕುರಿತು ಸಾಗರದ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ ವಿ ರವೀಂದ್ರನಾಥ ವಿವರವಾದ ಮಾಹಿತಿ ಒದಗಿಸಿದರು.

ಸಾಯಂಕಾಲ 5.30 ರಿಂದ 7.00 ರವರೆಗೆ ಕೆಎಮ್‌ಎಫ್ ಕಲಬುರ್ಗಿಯ ವ್ಯವಸ್ಥಾಪಕರಾದ ಡಾ॥ ಸುನಿಲರವರು ಸೌಹಾರ್ದ ಸಹಕಾರಿಗಳ ಮೂಲಕ ಹೈನುಗಾರಿಕೆಯ ಅಭಿವೃದ್ಧಿ ಕುರಿತು ಮೊದಲು ವಿಷಯ ಮಂಡನೆ ಮಾಡಿ ನಂತರ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿದರು ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಉಪಸ್ಥಿತರಿದ್ದರು.

**ದಿನಾಂಕ : 16.12.2018, ರವಿವಾರ :** ಬೆಳಗ್ಗೆ 9.00 ರಿಂದ 10.30 ರವರೆಗೆ ಮಹಿಳಾ ಸ್ವ-ಸಹಾಯ ಸಂಘಗಳ ರಚನೆ ಹಾಗೂ ನಿರ್ವಹಣೆ ಕುರಿತು ಮೈರಾಡದ ಸಂಯೋಜಕರಾದ ಶ್ರೀ ಸಿರಾಜೊದ್ದಿನ್ ರವರು ಸ್ವಸಹಾಯ ಸಂಘಗಳ ರಚನೆ, ಉದ್ದೇಶ ಹಾಗೂ ಪರಿಕಲ್ಪಣೆ ಕುರಿತು ಮಾಹಿತಿ ನಿಡಿದರು.

ಬೆಳಗ್ಗೆ 10.30 ರಿಂದ 1.30 ರವರೆಗೆ ಸಹಕಾರ ಸಂಸ್ಥೆಗಳ ಸಭೆಗಳು ಹಾಗೂ ಸಭೆಗಳ ನಿರ್ವಹಣೆ ಕುರಿತು ಉಪನ್ಯಾಸವನ್ನು ಸಹಕಾರ ತರಬೇತಿದಾರರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ತೆಗೆದುಕೊಂಡಿದ್ದು ಈ ಉಪನ್ಯಾಸದಲ್ಲಿ ಸಹಕಾರಿಗಳು ಜರುಗಿಸಬೇಕಾದ ಸಭೆಗಳ ವಿಧಗಳು ಹಾಗೂ ಅದರ ರಚನೆ ಕುರಿತು ಮಾಹಿತಿ ನೀಡಿದರು. ಮಧ್ಯಾಹ್ನ 2.00 ರಿಂದ 4.00 ರವರೆಗೆ ವ್ಯಕ್ತಿತ್ವ ವಿಕಸನ ಹಾಗೂ ಒತ್ತಡ ನಿರ್ವಹಣೆ ಕುರಿತು ಕಲಬುರ್ಗಿ ಸರಕಾರಿ

ಪದವಿ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಟಿ ಗುರುಬಸಪ್ಪ ರವರು ಉದಾಹರಣೆಯೊಂದಿಗೆ ಉಪನ್ಯಾಸ ನೀಡಿದರು.

**ಮಧ್ಯಾಹ್ನ 4.00 ಗಂಟೆಗೆ ಸಮಾರೂಪ ಸಮಾರಂಭ :** ಪ್ರತಿನಿಧಿಗಳೊಂದಿಗೆ ಪ್ರಶ್ನೋತ್ತರ ಕಾರ್ಯಕ್ರಮ ನಡಿಸಿ ನಂತರ ಆಯ್ದ ನಾಲ್ಕು ಪ್ರತಿನಿಧಿಗಳು ತರಬೇತಿಯ ಕುರಿತು ಅನಿಸಿಕೆ ವ್ಯಕ್ತಪಡಿಸಿದರು, ನಂತರ ಎಲ್ಲಾ ಪ್ರತಿನಿಧಿಗಳಿಗೆ, ತರಬೇತಿಯಲ್ಲಿ ಭಾಗವಹಿಸಿದಕ್ಕೆ ಪ್ರಮಾಣ ಪತ್ರ ನೀಡಲಾಯಿತ್ತು. ನಿರ್ದೇಶಕರಾದ ಸಂಜೀವ ಮಹಾಜನ ಮಾತನಾಡಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳ ಪ್ರಯತ್ನದಿಂದಾಗಿ ಪ್ರತಿನಿಧಿಗಳ ಭಾಗವಹಿಸಿಕೆ ಹೆಚ್ಚಳವಾಗಿದೆ ಇದರಿಂದಾಗಿ ಮಂದಿನ ದಿನಗಳಲ್ಲಿ ಹೆಚ್ಚು ತರಬೇತಿಗಳನ್ನು ಹಮ್ಮಿಕೊಳ್ಳಲು ಉತ್ಸಾಹ ಮೂಡಿದೆ ಎಂದರು. ಸಮಾರೂಪ ಭಾಷಣ ಮಾಡಿದ ಶ್ರೀ ಗುರುನಾಥ ಜ್ಯಾಂತಿಕರರವರು ಇತ್ತೀಚಿಗೆ ನಮ್ಮ ಭಾಗದ ಸಹಕಾರಿಗಳು ಎಲ್ಲಾ ತರಬೇತಿಗಳಲ್ಲಿ ಭಾಗವಹಿಸುವುದರ ಮುಖಾಂತರ ತಮ್ಮ ಕಾರ್ಯಚಟುವಟಿಕೆಯಲ್ಲಿ ಗುಣಮಟ್ಟ ಉಂಟಾಗಿದೆ ಆದ್ದರಿಂದ ಇಂಹತ ತರಬೇತಿಗಳು ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಜರುಗಿಸಲು ಆಡಳಿತ ಮಂಡಳಿ ಸಿದ್ದವಿದೆ ಎಂದು ಹೇಳಿದರು. ಸ್ವಾಗತವನ್ನು ಶ್ರೀ ರಾಜಶೇಖರ ಎಚ್, ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಓಂಕಾರ ಧರಣೆ ನೆರವೆರಿಸಿದರು. ಈ ಎರಡು ದಿನದ ತರಬೇತಿಯಲ್ಲಿ 38 ಸಹಕಾರಿಗಳಿಂದ 9 ಮಹಿಳಾ ನಿರ್ದೇಶಕ ಪ್ರತಿನಿಧಿಗಳು ಸೇರಿ 69 ಪ್ರತಿನಿಧಿಗಳು ಭಾಗವಹಿಸಿ ತರಬೇತಿಯ ಲಾಭ ಪಡೆದರು.

## ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2018-19ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯ ವಿವರಗಳು

| ಕ್ರ.ಸಂ. | ಜಿಲ್ಲೆ/ತಾಲ್ಲೂಕು | ಸ್ಥಳ | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಮುಖ್ಯಕಾರ್ಯ ನಿರ್ವಾಹಕರ ಸಂಖ್ಯೆ ಹಾಗೂ ಇತರರು |
|---|---|---|---|---|
| 1 | ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳು | ಮಂತ್ರ ರೆಸಿಡೆನ್ಸಿ, ಹಳೇ ಬಸ್ ನಿಲ್ದಾಣದ ಹತ್ತಿರ, ಹುಬ್ಬಳ್ಳಿ. | 54 | 65 |
| 2 | ಬಾಗಲಕೋಟ ಜಿಲ್ಲೆಯ ಬಾಗಲಕೋಟ, ಹುನಗುಂದ ಮತ್ತು ಬದಾಮಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಡಿಸಿಸಿ ಬ್ಯಾಂಕ ಹಾಲ್, ನವನಗರ, ಬಾಗಲಕೋಟ | 45 | 70 |
| 3 | ಬಾಗಲಕೋಟ ಜಿಲ್ಲೆಯ ಬೀಳಗಿ ಮತ್ತು ಮುಧೋಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಶ್ರೀ ವಿನಾಯಕ ಹೋಟೆಲ್, ರನ್ನ ಸರ್ಕಲ್, ಲೋಕಾಪುರ ರಸ್ತೆ, ಮುಧೋಳ | 55 | 93 |
| 4 | ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಎಸ್.ಆರ್. ಕ್ಲಬ್ ಹಾಲ್ , ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ , ಜಮಖಂಡಿ | 83 | 120 |
| 5 | ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳು | ಐ.ಎಂ.ಎ, ಸಭಾಂಗಣ, ಗದಗ. | 30 | 39 |
| 6 | ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳು | ಗ್ರೀನ್ ಕೋರ್ಟ, ಶ್ರೀ ಸಾಯಿ ರೆಸಿಡೆನ್ಸಿ, ಹಾವೇರಿ | 93 | 113 |
| 7 | ಉತ್ತರಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ, ಕಾರವಾರ, ಅಂಕೋಲ, ಭಟ್ಕಳ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳು | ಗೋಕುಲ ರೆಸಿಡೆನ್ಸಿ ಡಾ॥ ದಿನಕರ ದೇಸಾಯಿ ರಸ್ತೆ, ಅಂಕೋಲಾ | 54 | 69 |
| 8 | ಉತ್ತರಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪೂರ, ಯಲ್ಲಾಪೂರ ಮತ್ತು ಮುಂಡಗೋಡ | ಟ.ಎಂ.ಎಸ್. ಸಭಾಭವನ ಮಾರ್ಕೆಟ್ ಯಾರ್ಡ್, ಶಿರಸಿ | 42 | 49 |
| 9 | ಮೈಸೂರು, ಮಂಡ್ಯ ಹಾಗೂ ಕೊಡಗು | ಹೋಟೆಲ್ ಮಯೂರ ಹೊಯ್ಸಳ, ಜೆಎಲ್‌ಬಿ ರಸ್ತೆ, ರೈಲ್ವೆ ನಿಲ್ದಾಣದ ಹತ್ತಿರ, ಮೈಸೂರು | 38 | 38 |
| 10 | ಚಾಮರಾಜನಗರ | ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಆರ್‌ಕೆ ನರ್ಸಿಂಗ್ ಹೋಮ್ ಎದುರು, (ಸುಜುಕಿ ಶೋ ರೂಮ್‌ನ ಮೇಲಂತಸ್ತು), ಬಿ ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ | 9 | 9 |
| 11 | ಹಾಸನ & ಚಿಕ್ಕಮಗಳೂರು | "ಹೋಟೆಲ್ ಗ್ರಾಂಡ್ ಕೃಷ್ಣಾ" ನರಸಿಂಗ ಕೆಎಸ್ಆರ್ ರೋಡ್, ಬಸವನಹಳ್ಳಿ, ಚಿಕ್ಕಮಗಳೂರು | 65 | 35 |
| 12 | ಉಡುಪಿ | ನೈವೇದ್ಯ ಹೋಟೆಲ್, ತಾಲ್ಲೂಕು ಕಛೇರಿ ಸರ್ಕಲ್ ಹತ್ತಿರ, ಕೋರ್ಟ್ ರೋಡ್, ಉಡುಪಿ. | 70 | 70 |

| | | | | |
|---|---|---|---|---|
| 13 | ಮಂಗಳೂರು | ದಕ್ಷಿಣ ಕನ್ನಡ ಜಿಲ್ಲಾ ಸಂಪರ್ಕ ಕಛೇರಿ, ನೆಲಮಹಡಿ, ಅದೋನಿ ಟವರ್ಸ್, ಫಳ್ನೀರ್ ರಸ್ತೆ, ಮಂಗಳೂರು. | 58 | 58 |
| 14 | ಕೋಲಾರ | ಸೌಖ್ಯ ಸಮೃದ್ಧಿ ಸಹಕಾರಿ ನಿಯಮಿತ, , ಕೋಲಾರ | 15 | 12 |
| 15 | ಬೆಂಗಳೂರು | ಕದಂಬ ಹೋಟೆಲ್,ರಾಜಾಜಿನಗರ ಬೆಂಗಳೂರು | 91 | 35 |
| 16 | ರಾಮನಗರ | ರಾಮನಗರ ಜಿಲ್ಲಾ ಸಂಪರ್ಕ ಕಛೇರಿ | 9 | 11 |
| 17 | ಬೆಂಗಳೂರು | ನ್ಯೂ ಶಾಂತಿಸಾಗರ್ ಸಹಕಾರನಗರ ಬೆಂಗಳೂರು | 13 | 20 |
| 18 | ತುಮಕೂರು | ತುಮಕೂರು ಜಿಲ್ಲಾ ಸಂಪರ್ಕ ಕಛೇರಿ | 124 | 87 |
| 19 | ದೇವನಹಳ್ಳಿ | ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಪರ್ಕ ಕಛೇರಿ | 13 | 17 |
| 20 | ಬೆಂಗಳೂರು | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಪದ್ಮನಾಭನಗರ, ಬೆಂಗಳೂರು | 33 | 43 |
| 21 | ಬೆಂಗಳೂರು | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಪದ್ಮನಾಭನಗರ, ಬೆಂಗಳೂರು | 28 | 35 |
| 22 | ತಿಪಟೂರು | ಉದಯರವಿ ಸೌಹಾರ್ದ ಸಹಕಾರಿ ತಿಪಟೂರು | 18 | 12 |
| 23 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ಜಿಲ್ಲಾ ಸಂಪರ್ಕ ಕಛೇರಿ | 19 | 12 |
| 24 | ಕಲಬುರಗಿ | ಹೆಚ್.ಕೆ.ಸಿ.ಸಿ ಸಭಾಂಗಣ, ಕಲಬುರಗಿ | 45 | 58 |
| 25 | ರಾಯಚೂರು | ವಿನಯ ರೆಸಿಡೆನ್ಸಿ, ಸಿಂಧನೂರು | 111 | 127 |
| 26 | ಕೊಪ್ಪಳ | ಕೇತೇಶ್ವರ ಕಲ್ಯಾಣ ಮಂಟಪ, ಕೊಪ್ಪಳ | 125 | 141 |
| 27 | ಯಾದಗಿರಿ | ಮಾತೋಶ್ರೀ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ, ಶಹಾಪುರ. | 23 | 25 |

## ಪ್ರವರ್ತಕರ ಸಭೆ

**ಮೈಸೂರು** : ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಯಲ್ಲಮ್ಮದೇವಿ ಸಭಾಭವನದಲ್ಲಿ ದಿನಾಂಕ : 21-12-2018ರಂದು ಮದ್ಯಾಹ್ನ 3.00 ಗಂಟೆಗೆ ಪ್ರವರ್ತಕರ ಸಭೆಯನ್ನು ಆಯೋಜನೆ ಮಾಡಲಾಗಿತ್ತು. ಸದರಿ ಸಭೆಯಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ಸಹಕಾರಿಯ ಚಳುವಳಿಯ ಕುರಿತು ಹಾಗೂ ಸೌಹಾರ್ದ ಸಹಕಾರಿಯ ಸ್ಥಾಪನೆಯಿಂದ ಅಗುವ ಅನುಕೂಲತೆಗಳ ಬಗ್ಗೆ ವಿವರಿಸಿದರು. ಸಂಯುಕ್ತ ಸಹಕಾರಿಯ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು ಹಾಗೂ ಸದರಿ ಪ್ರವರ್ತಕರ ಸಭೆಯಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕಿನ 39 ಪ್ರತಿನಿಧಿಗಳು ಭಾಗವಹಿಸಿದ್ದರು.



**ಉತ್ತರಕನ್ನಡ** : ಉದ್ದೇಶಿತ ಉತ್ತರ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಪ್ರವರ್ತಕರ ಸಭೆಯು ದಿನಾಂಕ 03.01.2019ರಂದು ಯಲ್ಲಾಪುರದಲ್ಲಿ ಜರುಗಿತು. ಸಭೆಯಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀಮತಿ ಸರಸ್ವತಿ ರವರು ಉಪಸ್ಥಿತರಿದ್ದರು.



**ಮೈಸೂರು** : ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ಮೈಸೂರು ಜಿಲ್ಲೆಯ ಕೆ ಆರ್ ನಗರ ತಾಲ್ಲೂಕಿನ ಪ್ರವಾಸಿ ಮಂದಿರದಲ್ಲಿ ದಿನಾಂಕ : 21-12-2018ರಂದು ಬೆಳಿಗ್ಗೆ 10.00 ಗಂಟೆಗೆ ಪ್ರವರ್ತಕರ ಸಭೆಯನ್ನು ಆಯೋಜನೆ ಮಾಡಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ನೆರವೇರಿಸಿದರು ಹಾಗೂ ಪತ್ರಕರ್ತರಿಂದ ಸಂಯುಕ್ತ ಸಹಕರಿಯ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು.

ನಂತರ ಸಹಕಾರಿಯ ಚಳುವಳಿಯ ಕುರಿತು ಹಾಗೂ ಸೌಹಾರ್ದ ಸಹಕಾರಿಯ ಸ್ಥಾಪನೆಯಿಂದ ಅಗುವ ಅನುಕೂಲತೆಗಳ ಬಗ್ಗೆ ವಿವರಿಸಿದ್ದರು. ಸಂಯುಕ್ತ ಸಹಕಾರಿಯ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು ಹಾಗೂ ಸದರಿ ಪ್ರವರ್ತಕರ ಸಭೆಯಲ್ಲಿ ಕೆ ಆರ್ ನಗರ ತಾಲ್ಲೂಕಿನ 82 ಪ್ರತಿನಿಧಿಗಳು ಭಾಗವಹಿಸಿದ್ದರು.

## ಕ್ಲಸ್ಟರ್ ತರಬೇತಿ



ಬೆಂಗಳೂರು : ದಿನಾಂಕ : 05.12.2018 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಹಾಗೂ ದಿನಾಂಕ : 06.12.2018ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಚುನಾವಣೆಗೆ ಸಂಬಂಧಪಟ್ಟ ಮಾಹಿತಿ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ರಾಜೇಶ್ ಕೆ.ಎಂ, ಸೌಹಾರ್ದ ಅಭಿವೃದ್ಧಿ ಅಧಿಕಾರಿ ರವರು ಉಪಯುಕ್ತ ಮಾಹಿತಿಯನ್ನು ಒದಗಿಸಿದರು.

## ಹಾಸನ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಮಾಲೋಚನ ಸಭೆ



### ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಜಿಎಸ್‌ಟಿ ನಂ. 29AAAJK0364R1ZN

## ದಾವಾ ಪಂಚಾಯ್ತಿ ನ್ಯಾಯಾಲಯ ಎಬಿನ್ ಖಾತೆ ಮತ್ತು ಅಮಲ್ಜಾರಿ ಬ್ಯಾಂಕ್ ಖಾತೆಗಳ ಸಂಖ್ಯೆ

## ಸಹಕಾರಿಗಳ ಗಮನಕ್ಕೆ

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ (441) ನ್ಯಾಯಾಲಯದಲ್ಲಿ ದಾವೆಯನ್ನು ಹೂಡುವ ಸಲುವಾಗಿ ಈ ಹಿಂದೆ ಹೊಂದಿದಂತಹ ಸಿಂಡಿಕೇಟ್ ಬ್ಯಾಂಕ್‌ನ ಉಳಿತಾಯ ಖಾತೆಗಳು ಅಂದರೆ ಎಬಿನ್ ಖಾತೆ ಸಂಖ್ಯೆ 04242010120551 ಮತ್ತು ಅಮಲ್ಜಾರಿ ಶುಲ್ಕ ಪಾವತಿಸುವ ಖಾತೆ ಸಂಖ್ಯೆ 04242010123239 ಬದಲಾವಣೆಗೊಂಡಿದ್ದು ಪ್ರಸ್ತುತ ಚಾಲ್ತಿ ಖಾತೆಯನ್ನು ಹೊಂದಿದ್ದು ತಮ್ಮ ಗಮನಕ್ಕೆ ಈ ಮೂಲಕ ತರಬಯಸುತ್ತಾ ಪ್ರಸ್ತುತ ಚಾಲ್ತಿ ಖಾತೆಯ ವಿವರಗಳು ಈ ಕೆಳಗಿನಂತಿವೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ (441) ನ್ಯಾಯಾಲಯಲ್ಲಿ ದಾವೆಯನ್ನು ಹೂಡುವ ಸೌಹಾರ್ದ ಸಹಕಾರಿಗಳು ಸಿಂಡಿಕೇಟ್ ಬ್ಯಾಂಕ್‌ನಲ್ಲಿ Karnataka state souharda federal co operative ltd., ಎಂಬ ಹೆಸರಿನಲ್ಲಿ ದಾವಾ ಶುಲ್ಕವನ್ನು (ABN fees only) ಮಾತ್ರ ಖಾತೆ ಸಂಖ್ಯೆ : 04241010005443, Ifsc code : SYNB0000424 ಶಾಖೆ ಮಲ್ಲೇಶ್ವರಂನಲ್ಲಿ, ಹೊಂದಿದ್ದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸಲು ಕೋರಿದೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ (441) ನ್ಯಾಯಾಲಯಲ್ಲಿ ದಾವೆಯನ್ನು ಹೂಡುವ ಸೌಹಾರ್ದ ಸಹಕಾರಿಗಳು ಸಿಂಡಿಕೇಟ್ ಬ್ಯಾಂಕ್‌ನಲ್ಲಿ Karnataka state souharda federal co operative ltd., Executive petition Or KSSFCL Executive petition ಎಂಬ ಹೆಸರಿನಲ್ಲಿ ಅಮಲ್ಜಾರಿ ಶುಲ್ಕವನ್ನು (EP fees only) ಮಾತ್ರ ಖಾತೆ ಸಂಖ್ಯೆ : 04241010005462, Ifsc code : SYNB0000424 ಶಾಖೆ ಮಲ್ಲೇಶ್ವರಂನಲ್ಲಿ ಹೊಂದಿದ್ದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸಲು ಕೋರಿದೆ.

**ದಾವಾ ಶುಲ್ಕವನ್ನು ಪಾವತಿಸಿದಂತಹ ಸೌಹಾರ್ದ ಸಹಕಾರಿಗಳು ಪ್ರಾಂತೀಯವಾರು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಮಾಹಿತಿಯನ್ನು ನೀಡಿ ಸಹಕರಿಸಲು ಕೋರಿದೆ.**

**ಬೆಳಗಾವಿ ಪ್ರಾಂತ : ರಾಚಯ್ಯ ಹಿರೇಮಠ, ದೂರವಾಣಿ ಸಂಖ್ಯೆ 8884460278**

**ಕಲಬುರಗಿ ಪ್ರಾಂತ : ಶ್ರೀಧರ, ದೂರವಾಣಿ ಸಂಖ್ಯೆ 9513566601**

**ಬೆಂಗಳೂರು ಪ್ರಾಂತ : ಶ್ರೀಧರ ಮಟೋಳ್ಳಿ, ದೂರವಾಣಿ ಸಂಖ್ಯೆ 8548049598**

**ಮೈಸೂರು ಪ್ರಾಂತ : ಬಲರಾಮ್ ಎನ್, ದೂರವಾಣಿ ಸಂಖ್ಯೆ 8884460273**

ಅಮಲ್ಜಾರಿ ಶುಲ್ಕವನ್ನು ಪಾವತಿಸಿದಂತಹ ಸೌಹಾರ್ದ ಸಹಕಾರಿಗಳು ಪ್ರಾಂತೀಯವಾರು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಮಾಹಿತಿಯನ್ನು ನೀಡಿ ಸಹಕರಿಸಲು ಕೋರಿದೆ.

**ಬೆಳಗಾವಿ ಮತ್ತು ಕಲಬುರಗಿ ಪ್ರಾಂತಗಳು : ವಿನೋದ ಹೆಚ್ ಎ 8884466730**

**ಬೆಂಗಳೂರು ಮತ್ತು ಮೈಸೂರು ಪ್ರಾಂತಗಳು : ದರ್ಶನ್ ಕೆ 8884460265**

## "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ ಡಿಪ್ಲೋಮಾ"

ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ
ಆಸಕ್ತ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ ಹಾಗೂ ಯುವಕ ಯುವತಿಯರಿಗೆ
6 ತಿಂಗಳ ದೂರ ಶಿಕ್ಷಣ ಕೋರ್ಸ" 1ನೇ ಜನವರಿ 2019 ರಿಂದ ಪ್ರಾರಂಭ
**"Diploma in Cooperation and Banking Management"(DCBM)**
**6 Months Distance Education Course starts from 1st January 2019**

## ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ "ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ್" ನ್ನು ಇದೇ ಜನವರಿ 2019 ರಿಂದ ಪ್ರಾರಂಭಿಸಲಾಗುತ್ತದೆ.

ಈ ತರಬೇತಿ ಪೂರ್ಣಗೊಳಿಸುವುದರಿಂದ ಸಹಕಾರಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ.ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳ ಸಿಬ್ಬಂದಿಯವರಿಗೆ ಸೇವೆ ಖಾಯಂಯಾಗಲು ಹಾಗೂ ಸೇವೆಯಲ್ಲಿ ಬಡ್ತಿ ಪಡೆಯಲು ಪ್ರಯೋಜನವಾಗಲಿದೆ. ಈ ಕೋರ್ಸಗೆ ರಾಷ್ಟ್ರೀಯ ಸಹಕಾರ ಶಿಕ್ಷಣ ಸಂಸ್ಥೆ ನವದೆಹಲಿ (National council for cooperative training New Delhi) ಇವರಿಂದ ಮಾನ್ಯತೆ ಪಡೆಯಲು ಕ್ರಮವಿಡಲಾಗಿದೆ.

ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು (ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು.ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕೋರ್ಸ್ ಫೀ :** ರೂ. 5000/-(ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ. ಅರ್ಜಿಯ ಜೊತೆಗೆ ಕೋರ್ಸ ಫೀ ರೂ 5,000/-ಗಳನ್ನು ಕಳುಹಿಸುವುದು.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳೇ ಊಟ, ವಸತಿ ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಆದ್ದರಿಂದ ಈ ಕೋಸ್‌ನ ಒಟ್ಟಾರೆ ಶುಲ್ಕ 3000/- ಗಳನ್ನು ಕಡಿಮೆ ಗೊಳಿಸಿ 5000+1500 = 6500/-ಕ್ಕೆ ನಿಗದಿಗೊಳಿಸಿದೆ. ಕೋರ್ಸ್‌ನ ಒಟ್ಟಾರೆ ಶುಲ್ಕ ರೂ. 6500/-ಕ್ಕೆ ಜಿ.ಎಸ್.ಟಿ. 18% ರಂತೆ ರೂ. 1170/- ಗಳನ್ನು ಸೇರಿಸಿ ಕಳುಹಿಸುವುದು.

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವನ್ನು ದಿನಾಂಕ : 14.01.2019ರವರೆಗೆ ವಿಸ್ತರಿಸಲಾಗಿದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ಕಛೇರಿಯ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

**ಸಹಿ/-**
**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕರು**

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರಗಳು ಸೌಹಾರ್ದ ಸಹಕಾರಿಗಳ ಭೇಟಿ





**ಬೆಂಗಳೂರು :** ದಿನಾಂಕ : 06.12.2018ರಂದು ವಿಶ್ವಗುರು ಬಸವಣ್ಣ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರೂ ಮತ್ತು ಉದ್ಧೇಶಿತ ಬೆಂಗಳೂರು ಮತ್ತು ರಾಮನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಪ್ರವರ್ತಕರೂ ಆದ ಶ್ರೀ ಗುಂಡೂರಾವ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಅವರುಗಳು ಭೇಟಿ ನೀಡಿದ್ದರು.

ಶ್ರೀಯುತರುಗಳನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಪಾಲನೇತ್ರಪ್ಪನವ ರನ್ನು ಆದರದಿಂದ ಬರಮಾಡಿಕೊಂಡು ಹೃತ್ಪೂರ್ವಕವಾಗಿ ಸ್ವಾಗತಿಸಿ ನಂತರ ಸಹಕಾರಿಯ ಪ್ರಗತಿ ಬಗ್ಗೆ ವಿವರಣೆ ವರದಿ ನೀಡಿದರು. ಈ ಸಂದರ್ಭದಲ್ಲಿ, ಶ್ರೀಯುತರುಗಳು ಮಾತನಾಡಿ ವಿಶ್ವಗುರು ಬಸವಣ್ಣ ಸೌಹಾರ್ದ ಕ್ರೆಡಿಟ್ ಸಹಕಾರಿಯ ಪ್ರಗತಿ ಬಗ್ಗೆ ಮತ್ತು ಅದರ ಅಧ್ಯಕ್ಷರ ಕ್ರಿಯಾಶೀಲತೆ ಬಗ್ಗೆ ಹಾಗೂ ನಿರ್ದೇಶಕ ಮಂಡಳಿ ಸದಸ್ಯರುಗಳು ಸಹಕಾರಿಯ ಪ್ರಗತಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವುದರ ಮೂಲಕ ಒಮ್ಮತದಿಂದ ಶ್ರಮಿಸುತ್ತಿರುವುದರ ಬಗ್ಗೆ ಪ್ರಶಂಸಿಸಿದರು. ಹಾಗೂ ಸಹಕಾರಿಯು ಮುಂಬರುವ ವರ್ಷಗಳಲ್ಲಿ ತನ್ನ ಸದಸ್ಯರುಗಳಿಗೆ ಸಮಯೋಚಿತ ಹಣಕಾಸಿನ ನೆರವು ನೀಡುವುದರ ಮೂಲಕ ಅವರುಗಳ ಆರ್ಥಿಕ ಪ್ರಗತಿಗೆ ನೆರವಾಗುವುದರ ಮೂಲಕ ತಾನೂ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸಿದರು. ಇದೇ ಸಂದರ್ಭದಲ್ಲಿ, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಸಿ. ಪಾಲನೇತ್ರಪ್ಪನವರು, ಸಂಯುಕ್ತ ಸಹಕಾರಿಯ ನಿರ್ದೇಶಕರೂ ಮತ್ತು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಪ್ರವರ್ತಕರಾದ ಶ್ರೀ ಗುಂಡೂರಾವ್ ಅವರಿಗೆ ಉದ್ಧೇಶಿತ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸದಸ್ಯತ್ವದ ಚೆಕ್ಕನ್ನು ಹಸ್ತಾಂತರಿಸಿದರು.

ಅಧ್ಯಕ್ಷರಾದ ಶ್ರೀ ಜಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಗುಂಡೂರಾವ್ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಅವರುಗಳನ್ನು ವಿಶ್ವಗುರು ಬಸವಣ್ಣ ಸೌಹಾರ್ದ ಕ್ರೆಡಿಟ್ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಸಿ.ಪಾಲನೇತ್ರಪ್ಪ ಮತ್ತು ನಿರ್ದೇಶಕ ಮಂಡಳಿ ಸದಸ್ಯರುಗಳು ಸನ್ಮಾನಿಸಿ ಗೌರವಿಸಿದರು.



ಹಾಸನ : ಶ್ರೀ ವಿಘ್ನೇಶ್ವರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಹಾಸನ ಸದರಿ ಸಹಕಾರಿಗೆ ಭೇಟಿ ನೀಡಿದಾಗ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ಹೆಚ್. ಕೃಷ್ಣಾರೆಡ್ಡಿ ರವರನ್ನು ಸನ್ಮಾನಿಸಿದರು.



ಹಾಸನ : ಶ್ರೀ ಸಾಯಿರಾಂ ಸೌಹಾರ್ದ ಪತ್ತಿನ ಸಹಕಾರಿ ಭೇಟಿ.



ಹಾಸನ : ಶ್ರೀ ಸಾಯಿಸಿರಿ ಸೌಹಾರ್ದ ಪತ್ತಿನ ಸಹಕಾರಿಗೆ ಭೇಟಿ.



ಹಾಸನ : ಶ್ರೀ ಮಂಜುನಾಥೇಶ್ವರ ಸೌಹಾರ್ದ ಸಹಕಾರಿ ಭೇಟಿ.

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ - ಸಹಕಾರಿ ಸಂಸ್ಥೆ



## ಜನವರಿ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ಫೆಬ್ರವರಿ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | | | |

## ಮೇ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

## ಜೂನ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

## ಸೆಪ್ಟೆಂಬರ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

## ಅಕ್ಟೋಬರ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

## ರಜಾ ದಿನಗಳು

| | | |
|---|---|---|
| ಜನವರಿ | 15 | ಮಕರ ಸಂಕ್ರಾಂತಿ |
| | 26 | ಗಣರಾಜ್ಯೋತ್ಸವ |
| ಮಾರ್ಚ್ | 04 | ಮಹಾಶಿವರಾತ್ರಿ |
| ಏಪ್ರಿಲ್ | 06 | ಚಾಂದ್ರಮಾನ ಯುಗಾದಿ |
| | 13 | ಶ್ರೀರಾಮ ನವಮಿ |
| | 14 | ಅಂಬೇಡ್ಕರ್ ಜಯಂತಿ |
| | 17 | ಮಹಾವೀರ ಜಯಂತಿ |
| | 19 | ಗುಡ್ ಫ್ರೈಡೇ |
| ಮೇ | 01 | ಕಾರ್ಮಿಕರ ದಿನ |
| | 07 | ಬಸವ ಜಯಂತಿ |
| ಜೂನ್ | 05 | ಕುತುಬ್-ಎ-ರಂಜಾನ್ |

Karnataka State Souharada Federal Co operative Ltd., Nirman Bhavan

# 2019



## ಮಾರ್ಚ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

## ಏಪ್ರಿಲ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | | | | | |

## ಜುಲೈ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

## ಆಗಸ್ಟ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

| | | |
|---|---|---|
| ಆಗಸ್ಟ್ | 12 | ಬಕ್ರೀದ್ |
| | 15 | ಸ್ವಾತಂತ್ರ್ಯ ದಿನ |
| ಸೆಪ್ಟೆಂಬರ್ | 02 | ಗಣೇಶ ಚತುರ್ಥಿ |
| | 10 | ಮೊಹರಂ 10ನೇ ದಿನ |
| | 28 | ಮಹಾಲಯ ಅಮವಾಸ್ಯೆ |
| ಅಕ್ಟೋಬರ್ | 02 | ಗಾಂಧಿ ಜಯಂತಿ |
| | 07 | ಮಹಾನವಮಿ/ಆಯುಧ ಪೂಜೆ |
| | 08 | ವಿಜಯ ದಶಮಿ |
| | 29 | ಬಲಿಪಾಡ್ಯಮಿ |
| ನವೆಂಬರ್ | 01 | ರಾಜ್ಯೋತ್ಸವ ದಿನ |
| | 15 | ಕನಕದಾಸ ಜಯಂತಿ |
| ಡಿಸೆಂಬರ್ | 25 | ಕ್ರಿಸ್‌ಮಸ್ |

## ನವೆಂಬರ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

## ಡಿಸೆಂಬರ್ 2019

| ಸೋ | ಮಂ | ಬು | ಗು | ಶು | ಶ | ಭಾ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

complex, Dr. Rajkumar Road, 1st Block, Rajajinagar, Bangalore-560 010



ಮಾನ್ವಿ : ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿಮಾಡಿ ಆದಾಯ ತೆರಿಗೆ ನೋಟೀಸುಗಳ ಬಗ್ಗೆ ಚರ್ಚಿಸಿದರು.

**ಬೆಂಗಳೂರು :** ಎಮ್.ಎಸ್ ರಾಮಯ್ಯ ಅವರ ಪುತ್ರರಾದ ಶ್ರೀ ಸೀತಾರಾಮ್ ರವರನ್ನು ಭೇಟಿ ಮಾಡಿ ಅವರಿಗೆ ಸಂಯುಕ್ತ ಸಹಕಾರಿಯ ಕಾಯ್ದೆ ಬಗ್ಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ರವರು ಮಾಹಿತಿ ನೀಡಿದರು.



ಸಿಂಧನೂರು : ರಾಣಿ ಚೆನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿಮಾಡಿ ಆದಾಯ ತೆರಿಗೆ ನೋಟೀಸುಗಳ ಬಗ್ಗೆ ಚರ್ಚಿಸಿದರು.



ಸಿಂಧನೂರು : ಸಪ್ತಗಿರಿ ಸೌಹಾರ್ದ ಪತ್ತಿನ ಸಹಕಾರಿಗೆ ಭೇಟಿ.



ಮಾನ್ವಿ : ಶ್ರೀ ಸಾಯಿ ಮಲ್ಲಿಕಾರ್ಜುನ ಪತ್ತಿನ ಸೌಹಾರ್ದ ಸಹಕಾರಿ ಸಹಕಾರಿಗೆ ಭೇಟಿ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 4,380 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2,532 ಪ್ರಕರಣಗಳು ಸೇರಿದಂತೆ ಒಟ್ಟು 6912 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 3,751 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,206 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 174 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 891 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 833 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 72 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 69 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 692 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.



ರೇನಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ – ಚಾಮರಾಜನಗರ



ಪಾವಗಡ : ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಹೊಸ ವರ್ಷವನ್ನು ಶ್ರೀ ವಾಸವಾಂಬ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳೊಂದಿಗೆ ಆಚರಿಸಲಾಯಿತು.

## ಉದ್ಘಾಟನಾ ಕಾರ್ಯಕ್ರಮ





ಹಾಸನ : ಸಹನಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಸಹನಾ ಆರ್ಕೇಡ್ ನೂತನ ವಾಣಿಜ್ಯ ಕಟ್ಟಡದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ನೆರವೇರಿಸಿದರು ಹಾಗೂ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಿದರು.

## ಉದ್ಘಾಟನಾ ಕಾರ್ಯಕ್ರಮ




ಬೀದರ : ಜೈ ಗಜಾನನ ಸೌಹಾರ್ದ ಸಹಕಾರಿ ನಿ., ಭಾಲ್ಕಿ ನೂತನ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ನೆರವೇರಿಸಿದರು.

## ೫ನೇ ವಾರ್ಷಿಕೋತ್ಸವ



ಕಲಬುರಗಿ : ಶ್ರೀ ಸೌಹಾರ್ದ ಸಹಕಾರಿ ನಿ., ಶಹಾಪುರ ೫ನೇ ವಾರ್ಷಿಕೋತ್ಸವದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಸಂಜೀವ ಮಹಾಜನ ರವರು ಉಪಸ್ಥಿತರಿದ್ದರು.

## ಶಾಖೆ ಉದ್ಘಾಟನೆ



ಕೊಪ್ಪಳ : ಶುಕುಮುರಿ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಶಾಖೆ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೇರಿಸಿದರು.

## ನೋಂದಣಿ ಪೂರ್ವ ಸಭೆ



ಚಿತ್ರದುರ್ಗ : ಉದ್ದೇಶಿತ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಒಕ್ಕೂಟದ ನೋಂದಣಿ ಪೂರ್ವ ಸಭೆಯನ್ನು ಚಿತ್ರದುರ್ಗದ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿಯವರ ನೇತೃತ್ವದಲ್ಲಿ ನಡೆಯಿತು. ಈ ಸಭೆಯಲ್ಲಿ 30 ಜನ ಪ್ರತಿನಿಧಿಗಳು ಭಾಗವಹಿಸಿದರು.



ಪಾವಗಡ : ದಿ ಪಾವಗಡ ಸೌಹಾರ್ದ ಸಹಕಾರಿಯಲ್ಲಿ ಆದಾಯ ತೆರಿಗೆ ಇಲಾಖೆಯ ಬಗ್ಗೆ ಮತ್ತು ಸೌಹಾರ್ದ ಒಕ್ಕೂಟದ ಬಗ್ಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ಇದರ ಬಗ್ಗೆ ಚರ್ಚಿಸಿದರು. ಈ ಸಭೆಯಲ್ಲಿ ಯಲಹಂಕ ಮತ್ತು ಹೆಬ್ಬಾಳ ಭಾಗದ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಸಿ.ಇ.ಓಗಳು ಭಾಗವಹಿಸಿದರು.



ಕೊಪ್ಪಳ : ಶುಕುಮುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಗಿಣಿಗೆರಿನಲ್ಲಿ ಭಾರತಿ ಇನ್ಶೂರೆನ್ಸ್ ಕಂಪನಿಯವರ ಸದಾಶಿವ ರವರು ಇನ್ಶೂರೆನ್ಸ್ ಕುರಿತು ಸಭೆ ಕರೆಯಲಾಗಿತ್ತು. ಸದರಿ ಸಭೆಯಲ್ಲಿ 16 ಸಹಕಾರಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ಮಾನವಿ : ಮನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಪ್ರಧಾನ ಕಛೇರಿಯಲ್ಲಿ ಇದರ 2019 ನೇ ಸಾಲಿನ ಕ್ಯಾಲೆಂಡರ್ ಅನ್ನು ಸಹಕಾರಿಯ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಆರ್.ತಿಮ್ಮಯ್ಯ ಶೆಟ್ಟಿ, ಆಡಳಿತ ಮಂಡಳಿ ಸದಸ್ಯರು ಹಾಗೂ ಶ್ರೀಯುತ ಎಂ.ನಾಗರಾಜ, ಮುಖ್ಯ ಕಾರ್ಯನಿರ್ವಾಹಕರು ಬಿಡುಗಡೆ ಮಾಡಿದರು.

## ಕ್ಯಾಲೆಂಡರ್ ಬಿಡುಗಡೆ

**ಹೊಸಪೇಟೆ** : ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ ಸಹಕಾರಿಯ 2019ರ ನೂತನ ಕ್ಯಾಲೆಂಡರ್ ಅನ್ನು ಕನ್ನಡ ಚಲನಚಿತ್ರ ನಟ ಶಂಕರ್ ಪಾಟೀಲ್ ಹಾಗೂ ಸಹಕಾರಿ ಉಪಾಧ್ಯಕ್ಷರಾದ ಡಾ.ಎಸ್. ಶಿವಾನಂದ ಹಾಗೂ ನಿರ್ದೇಶಕಗಳಾದ ಪಿ.ಮಲ್ಲಿನಾಥ, ದತ್ತಾತ್ರೇಯ ಮುತಾಲಿಕ ದೇಸಾಯಿ, ರಾಜಮಹಮದ್ ಬಡಿಗೇರ, ಸಿ.ಕೆ. ತಿಪ್ಪೇಸಾಮಿ, ಎಂ. ರಂಜಿತ್ ಸಹಕಾರಿ ಗ್ರಾಹಕರು ಬಿಡುಗಡೆಮಾಡಿದರು ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ರಾಘವೇಂದ್ರ ಕುಲಕರ್ಣಿ, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.






ಶ್ರೀ ರೇಣುಕ ಮಹೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಕ್ಯಾಲೆಂಡರ್ ಬಿಡುಗಡೆ ಸಮಾರಂಭ – ಬೀದರ



ವೀರಶೈವ ವಿಕಾಸ' ಸೌಹಾರ್ದ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಸಮಾರಂಭ – ರಾಯಚೂರು



**ಮಸ್ಕಿ :** ದೇವನಾಂಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಮಸ್ಕಿ. ಈ ಸಹಕಾರಿಯ ದಿವ್ಯ ಸಾನಿಧ್ಯವನ್ನು ವಹಿಸಿಕೊಂಡಿರುವ ಷ. ಬ್ರ. ಶ್ರೀ ವರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಪರಮ ಪೂಜ್ಯ ಶ್ರೀ ಶ್ರೀ ಸಿದ್ದರಾಮನಂದ ಮಾಹಾ ಸ್ವಾಮಿಗಳು ಕಾಗಿನೆಲೆ ಪೀಠ್ ಇವರು ಸಹಕಾರಿಯ ದಿನಾಚರಣೆಯ ನಿಮಿತ್ಯ ಸಹಕಾರಿಯಲ್ಲಿ ಕ್ಯಾಲೆಂಡರ ಬಿಡುಗಡೆ ಮಾಡಿದರು. ಸಹಕಾರಿಯು ಮುಂದಿನ ದಿನಮಾನದಲ್ಲಿ ಈ ಸಹಕಾರಿಯು ತಮ್ಮ ಸದಸ್ಯರಿಗೆ ಇನ್ನು ಹೆಚ್ಚಿದ್ದು ಹೊಸ ಯೋಜನೆಗೆಳನ್ನು ಮಾಡುವ ಶಕ್ತಿ ನೀಡಲಿ ಎಂದು ತಿಳಿಸಿದರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಗೌಡ ಸುಂಕನೂರು ಹಾಗು ಉಪಾಧ್ಯಕ್ಷರಾದ ಶ್ರೀ ಕರಿಯಪ್ಪ ಹಾಲಪೂರು, ನಿರ್ದೇಶಕರುಗಳಾದ ಶ್ರೀ ನಿಂಗಣ್ಣ ತಾತ ಪೂಜಾರಿ, ಮಲ್ಲಪ್ಪ ಪೂಜಾರಿ, ಮಳ್ಳಪ್ಪ ಪೂಜಾರಿ, ನಿರುಪಾದೇಪ್ಪ ಗುಡಿಹಾಳ, ರಾಮಣ್ಣ ಗಡಗಿ, ಲಿಂಗಪ್ಪ ಕಾನಿಹಾಳ, ಮಲ್ಲಯ್ಯ ಹಾಲದವರು, ಭೀಮಣ್ಣ ಕಾಸ್ಲಿ, ರಾಮಣ್ಣ ಬೌತ್ರು, ಎಲ್ಲಾ ಸದಸ್ಯರು ಸೇರಿ ಕ್ಯಾಲೆಂಡರ ಬಿಡುಗಡೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಶಾಖೆ ಉದ್ಘಾಟನೆ



ಬೆಂಗಳೂರು : ಶ್ರೀ ತ್ಯಾಗರಾಜನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಸಹಕಾರಿಯ ನೂತನ ಹೊಸಕೆರೆಹಳ್ಳಿ ಶಾಖೆಯನ್ನು ರಾಜಕೀಯ ದುರೀಣರಾದ ಶ್ರೀ ಭಾಗೇಗೌಡ ಹಾಗೂ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಡಾ. ಕೃಷ್ಣ ಟಿ. ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಸೇರಿ ಉದ್ಘಾಟಿಸಿದರು.



ಬೆಂಗಳೂರು ಸೌಹಾರ್ದ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಸಮಾರಂಭ – ಬೆಂಗಳೂರು



ಉಡುಪಿ : ವಿಶ್ವಕರ್ಮ ಸೌಹಾರ್ದ ಸಹಕಾರಿ ನಿ., ಬೈಂದೂರು ಇದರ ನಾಗೂರು ಶಾಖೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ಉದ್ಘಾಟಿಸಿದರು.

## ಭಾವಪೂರ್ಣ ಶ್ರದ್ದಾಂಜಲಿ



**ಬೆಲ್ಲದ ಬಾಗೇವಾಡಿ :** ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ, ಬೆಲ್ಲದ ಬಾಗೇವಾಡಿಯ ಅಧ್ಯಕ್ಷರಾದ ಶ್ರೀ ಸದಾಶಿವ ಚಂದ್ರಶೇಖರ ಕತ್ತಿ ಇವರು ದಿನಾಂಕ 04.12.2018 ರಂದು ತೀವ್ರ ಹೃದಯಾಘಾತದಿಂದ ನಿಧನರಾದರು, ಶ್ರೀಯುತರು ಕಳೆದ ಹಲವಾರು ವರ್ಷಗಳಿಂದ ಬ್ಯಾಂಕಿನ ನಿರ್ದೇಶಕರಾಗಿ ಮತ್ತು ಅಧ್ಯಕ್ಷರಾಗಿ ಬ್ಯಾಂಕಿನ ಪ್ರಗತಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿರುವದನ್ನು ಸ್ಮರಿಸಿ ಮೃತರ ಕುಟುಂಬಕ್ಕಾದ ದು:ಖದಲ್ಲಿ ಭಾಗಿಯಾಗಿ ಮೃತರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ ಅಂತಾ ಪ್ರಾರ್ಥಿಸಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಬ್ಯಾಂಕಿನ ಸದಸ್ಯರು ಶೋಕ ವ್ಯಕ್ತಪಡಿಸಿರುತ್ತಾರೆ. ಮೃತರು ನಿಧನರಾಗಿರುವದ್ದಕ್ಕೆ ಹುಕ್ಕೇರಿ ಮತ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಉಮೇಶ ವಿ. ಕತ್ತಿ ಹಾಗೂ ಬಿ. ಡಿ. ಸಿ. ಸಿ. ಬ್ಯಾಂಕ ನಿ ಬೆಳಗಾವಿಯ ಅಧ್ಯಕ್ಷರು ಹಾಗೂ ಮಾಜಿ ಸಂಸದರಾದ ಶ್ರೀ ರಮೇಶ ವಿ, ಕತ್ತಿ ಇವರು ಸಂತಾಪ ವ್ಯಕ್ತಪಡಿಸಿರುತ್ತಾರೆ.

# ಭಾಗ್ಯಗಳ ಕಾರ್ಯಕ್ರಮ ಬಿಟ್ಟು ಮಧ್ಯವರ್ತಿ ಸಹಕಾರಿ ಬ್ಯಾಂಕುಗಳನ್ನು ಅಭಿವೃದ್ಧಿಗೊಳಿಸುವಂತೆ ಅಗ್ರಹ - ರಮೇಶ ವೈದ್ಯ

ಸರಕಾರವು ಭಾಗ್ಯಗಳ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕಿಂತ ಮಧ್ಯವರ್ತಿ ಸಹಕಾರಿ ಬ್ಯಾಂಕುಗಳನ್ನು ಆರ್ಥಿಕವಾಗಿ ಬಲಿಷ್ಠಗೊಳಿಸುವ ಕಡೆ ಒತ್ತು ನೀಡಿ ಅಭಿವೃದ್ಧಿಗೊಳಿಸಿದರೆ ರೈತರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಸರಕಾರಕ್ಕೆ ಸಹಕಾರ ಭಾರತಿಯ ನೂತನ ರಾಷ್ಟ್ರೀಯ ಅಧ್ಯಕ್ಷರಾದ ರಮೇಶ ವೈದ್ಯರವರು ಸರಕಾರಕ್ಕೆ ಅಗ್ರಹಿಸಿದ್ದಾರೆ.



ಇಂದು ನಗರದ ಶಂಕರ ಮಠದ ಭವನದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ಕಲಬುರಗಿಯನ್ನು ದೀಪ ಪ್ರಜ್ವಲಿಸುವ ಮುಖಾಂತರ ಉದ್ಘಾಟಿಸಿ ಮಾತನಾಡುತ್ತ ಒಂದು ಮಧ್ಯವರ್ತಿ ಸಹಕಾರಿ ಬ್ಯಾಂಕ ಅಭಿವೃದ್ಧಿ ಹೊಂದಿದ್ದರೆ ಆ ಜಿಲ್ಲೆಯ ರೈತರ ಆರ್ಥಿಕ ಅಭಿವೃದ್ದಿಯ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಆದ್ದರಿಂದ ಸರಕಾರವು ಈ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ಅಗ್ರಹಿಸಿ ಮುಂದುವರೆದು ಮಾತನಾಡುತ್ತ ಇಂದು ಆಟೋ ಚಾಲಕರಿಂದ ಗುತ್ತಿಗೆದಾರರವರೆಗೆ ಎಲ್ಲರು ತಮ್ಮ ತಮ್ಮ ಸಂಘಗಳನ್ನು ಕಟ್ಟಿಕೊಳ್ಳುವುದರ ಮುಖಾಂತರ ಅವರ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳುತಿದ್ದಾರೆ, ಇಂದು ದೇಶದಲ್ಲಿ ಜನರ ಮಧ್ಯ ಸಂಪರ್ಕ ಹೊಂದಿರುವ ರಾಜಕೀಯ ಕ್ಷೇತ್ರದ ನಂತರ ಹೆಚ್ಚು ಜನರ ಸಂಪರ್ಕ ಹೊಂದಿರುವ ಕ್ಷೇತ್ರ ಸಹಕಾರಿ ಕ್ಷೇತ್ರ ಆದರೆ ಇಂತಹ ಕ್ಷೇತ್ರ ಒಗ್ಗಟ್ಟು ಹೊಂದಿಲ್ಲದ ಕಾರಣ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ ಆದ್ದರಿಂದ ಸಹಕಾರ ಕ್ಷೇತ್ರ ಒಗ್ಗಟ್ಟು ಆಗಲು ಇಂತಹ ಒಕ್ಕೂಟಗಳು ಪೂರಕವಾಗುತ್ತವೆ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಆಗಮಿಸಿದ ಶಾಸಕರಾದ ದತ್ತಾತ್ತೇಯ ಪಾಟೀಲ್ ರೇವೂರ ಮಾತನಾಡುತ್ತ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಜನಸಾಮಾನ್ಯರು ತಮ್ಮ ಉಳಿತಾಯ ಖಾತೆಯನ್ನು ತೆಗೆಯಲು ಪರದಾಡುವ ಸ್ಥಿತಿ ಉಂಟಾಗಿದೆ ಇನ್ನು ಸಾಲ ಪಡೆಯುವುದು ಮರಿಚಿಕೆವಾಗಿದೆ ಈ ರಾಷ್ಟ್ರೀಕೃತ ಬ್ಯಾಂಕುಗಳು ಕೇವಲ ಶ್ರೀಮಂತರ ಸೇವೆಗೆ ಮಿಸಲಾಗಿದೆ ಆದರೆ ಸೌಹಾರ್ದ ಸಹಕಾರಿಗಳು ಜನಸಾಮಾನ್ಯರೊಂದಿಗೆ ವ್ಯವಹಾರ ಜರುಗಿಸುವುದರ ಮುಖಾಂತರ ಅವರ ಆರ್ಥಿಕ ಅಭಿವೃದ್ದಿಗೆ ಪೂರಕವಾಗಿ ಕೆಲಸ ಮಾಡುತ್ತಿರುವುದು ಸಂತೋಷದ ಸಂಗಾತಿಯಾಗಿದೆ. ನಾನು ಯಾವಗಲೂ ಸಹಕಾರಿಗಳ ಪರವಾಗಿ ಇರುತ್ತೇನೆ ಸಹಕಾರಿಗಳಿಗೆ ಉಂಟಾಗುವ ಕಾನೂನು ತೊಡುಕುಗಳ ಬಂದರೆ ಸಹಕಾರಿಗಳ ಪರವಾಗಿ ವಿಧಾನ ಸೌಧದಲ್ಲಿ ಧ್ವನಿ ಎತ್ತುತ್ತೇನೆ ಎಂದು ಸಹಕಾರಿಗಳಿಗೆ ಧೈರ್ಯ ತುಂಬಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಒಕ್ಕೂಟ್ಟದ ಅಧ್ಯಕ್ಷರಾದ ಚಂದ್ರಶೇಖರ ಪರಸರೆಡ್ಡಿ ಮುಖ್ಯ ಅಥಿತಿಗಳಾಗಿ ವೇದಿಕೆ ಮೇಲೆ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಸಂಜೀವ ಮಹಾಜನ, ವೈ.ಟಿ. ಪಾಟಿಲ್, ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಪ್ರಕಾಶ ಕುಲಕರ್ಣಿ ಹಾಗೂ ಸಹಕಾರ ಭಾರತಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ನವೀನಕುಮಾರ ಉಪಸ್ಥಿತರಿದ್ದರು. ಮೊದಲಿಗೆ ಪ್ರಾರ್ಥನೆಯನ್ನು ಸಿದ್ದಾರ್ಥ ಚಿಮ್ಮಿದಲಾಯಿ ಸಂಗಡಿಗರು. ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಒಕ್ಕೂಟದ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾದ್ಯಮ ಸಹಕಾರ ಮಹಾಮಂಡಳದ ನಿರ್ದೇಶಕರಾದ ಎಸ್.ಎಸ್. ಪಾಟೀಲ್. ವಂದನಾರ್ಪಣೆಯನ್ನು ಒಕ್ಕೂಟದ ಉಪಾಧ್ಯಕ್ಷರಾದ ಪ್ರಕಾಶ ಕುಲಕರ್ಣಿ ನೆರವೇರಿಸಿದರೆ ನಿರೂಪಣೆಯನ್ನು ವೀರಶೆಟ್ಟಿ ಕೆ. ಅಚ್ಚುಕಟ್ಟಾಗಿ ನೇರವೆರಿಸಿದರು.

## ಶ್ರೀ ರಮೇಶ ವೈದ್ಯ ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆ

ರಾಜ್ಯದ ಹಿರಿಯ ಸಹಕಾರಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ರಮೇಶ ವೈದ್ಯ ರವರು ದಿನಾಂಕ 22.12.2018ರಂದು ಪುಷ್ಕರದಲ್ಲಿ ನಡೆದ ಸಹಕಾರ ಭಾರತಿ ರಾಷ್ಟ್ರೀಯ ಅಧಿವೇಶನದಲ್ಲಿ ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶ್ರೀಯುತರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಡಳಿತ ಮಂಡಳಿಯವರು ಮತ್ತು ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ಅಭಿನಂದನೆಯನ್ನು ಸಲ್ಲಿಸಿದ್ದಾರೆ.





ಶ್ರೀ ಉದ್ಭವ ಗಣಪ ಸೌಹಾರ್ದ ಪತ್ತಿನ ಸಹಕಾರಿ
ವಾರ್ಷಿಕ ಸಾಮಾನ್ಯ ಸಭೆ – ತಿಪಟೂರು



ಶ್ರೀ ಉದಯೋನ್ಮುಖ ಸೌಹಾರ್ದ ಪತ್ತಿನ ಸಹಕಾರಿ
1ನೇ ವಾರ್ಷಿಕ ಸಾಮಾನ್ಯ ಸಭೆ – ಕೊಪ್ಪಳ



ರಾಯಚೂರು ಸೌಹಾರ್ದ ಪತ್ತಿನ ಸಹಕಾರಿಯ ಶಾಖೆ
ಉದ್ಘಾಟನಾ ಕಾರ್ಯಕ್ರಮ – ರಾಯಚೂರು

## ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಗಾರ



ಬೆಂಗಳೂರು : ಜನನಿಧಿ ಸೌಹಾರ್ದ ಸಹಕಾರಿಯ ಎಲ್ಲಾ ಸಿಬ್ಬಂದಿಗಳಿಗೆ ಹಾಗೂ ನಿರ್ದೇಶಕರುಗಳಿಗೆ ದಿನಾಂಕ : 02.12.2018ರಂದು ಒಂದು ದಿನದ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಗಾರವನ್ನು ಇನ್ನರ್ ವಾಯ್ಸ ಸಂಸ್ಥೆಯ ಮುಖ್ಯಸ್ಥರು ಹಾಗೂ ತರಬೇತುದಾರರಾದ ಶ್ರೀಯುತ ಜಯಕುಮಾರ್ ರವರು ಸೃಷ್ಠಿ ಕ್ಯಾಂಪ್‌ನಲ್ಲಿ ತರಬೇತಿ ನೀಡಿದರು.

ಬೆಂಗಳೂರು : ಕೊಡಗು ದಕ್ಷಿಣಾ ಕನ್ನಡ ಗೌಡ ಸೌಹಾರ್ದ ಸಹಕಾರಿ ನಿಯಮಿತ ಬೆಂಗಳೂರು ಇದರ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 23.09.2018 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಹರೀಶ್ ದೇವಂಗೋಡಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಘೋಷಣೆ ಮಾಡಿದ ಲಾಭಾಂಶದ ಶೇ 10% ರಷ್ಟು ಡಿವಿಡೆಂಡ್‌ನ ಒಟ್ಟು ಮೊತ್ತ 2,60,000/– ರೂ ಗಳನ್ನು ಸದಸ್ಯರ ಅಪೇಕ್ಷೆ ಮೇರೆಗೆ ಕೊಡಗು ನೆರೆ ಸಂತ್ರಸ್ತರ ನೆರವಿಗೆ ನೀಡಲಾಯಿತು.

## ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ



ಬೆಂಗಳೂರು : ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿಗೆ 65ನೇ ಅಖಿಲ ಭಾರತ ಸಹಕಾರ ಸಪ್ತಾಹ 2018ರ ಅಂಗವಾಗಿ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿಯಮಿತ ಬೆಂಗಳೂರು ಇವರ ವತಿಯಿಂದ ದಿನಾಂಕ 17.11.2015ರಲ್ಲಿ ನಡೆದ ಕಾರ್ಯಕ್ರಮದಲ್ಲಿ ಉತ್ತಮ ಸೌಹಾರ್ದ ಸಹಕಾರ ಸಂಘವೆಂದು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸಹಕಾರಿಯ ಪರವಾಗಿ ನಿರ್ದೇಶಕರಾದ ಶ್ರೀಮತಿ ಟಿ.ಜಿ ಸುಶೀಲಮ್ಮ ರವರು ಭಾಗವಹಿಸಿ ಪ್ರಶಸ್ತಿಯನ್ನು ಸ್ವೀಕರಿಸಿದರು.



## ಶ್ರೀ ಸರಸ್ವತಿ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಕರ್ಣಾಟಕ ಬ್ಯಾಂಕಿನ ನಿವೃತ್ತ ಜನರಲ್ ಮ್ಯಾನೇಜರ್ ಶ್ರೀ ಎನ್. ಉಪೇಂದ್ರ ಪ್ರಭು

**ದರ್ಬೆ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಇದರ ವೃತ್ತಿಪರ ನಿರ್ದೇಶಕರನ್ನಾಗಿ ಶ್ರೀಯುತ ಎನ್. ಉಪೇಂದ್ರ ಪ್ರಭು ಇವರನ್ನು ಸಹಕಾರಿಯ ಆಡಳಿತ ಮಂಡಲಿಯು ಕೋ-ಆಪ್ಟ್ ಮಾಡಿರುತ್ತದೆ.

ಶ್ರೀಯುತರು ಪ್ರತಿಷ್ಠಿತ ಕರ್ಣಾಟಕ ಬ್ಯಾಂಕ್‌ನಲ್ಲಿ ಹಲವು ವರ್ಷಗಳ ಅನುಭವ ಹೊಂದಿದ್ದು ಜವಾಬ್ದಾರಿಯುತ ಜನರಲ್ ಮ್ಯಾನೇಜರ್ ಹುದ್ದೆಯಲ್ಲಿ ಅಲಂಕೃತಗೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸಿದ ಹಿರಿಮೆ ಮತ್ತು ಅನುಭವ ಹೊಂದಿರುತ್ತಾರೆ.

ನೂತನ ನಿರ್ದೇಶಕರಾಗಿ ಆಯ್ಕೆಯಾದ ಬಳಿಕ ಪ್ರಥಮ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿದ ಶ್ರೀಯುತರು ಸಹಕಾರಿಯ 17 ವರ್ಷಗಳ ಪ್ರಗತಿಯನ್ನು ಪ್ರಶಂಸಿಸಿ ಮುಂದಿನ ದಿನಗಳಲ್ಲಿ ಸಹಕಾರಿಯನ್ನು ಹೆಚ್ಚು ಪ್ರೊಫೆಶನಲ್ ರೀತಿಯಲ್ಲಿ ಕಾರ್ಯನಿರ್ವಹಿಸಲು ತಮ್ಮ ಸಲಹೆ ನೀಡುವುದಾಗಿ ತಿಳಿಸಿದರು.



ಪುತ್ತೂರಿನ ದರ್ಬೆಯಲ್ಲಿ ಪ್ರಧಾನ ಕಛೇರಿ ಹೊಂದಿ ರಾಜ್ಯವ್ಯಾಪಿ ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರಿಯು 2001ರಲ್ಲಿ ಆರಂಭಗೊಂಡು ರಾಜ್ಯದ ರಾಜಧಾನಿಯೂ ಒಳಗೊಂಡಂತೆ 17 ಶಾಖೆಗಳನ್ನು ಹೊಂದಿ ಕಾರ್ಯಾಚರಿಸುತ್ತಿದ್ದು, ನಿರಂತರ ಪ್ರಗತಿಯಲ್ಲಿ ಮುನ್ನಡೆಯುತ್ತಿದೆ.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬೃಹತ್ ಉಚಿತ ವೈದ್ಯಕೀಯ ಶಿಬಿರ

**ಮೂಡಬಿದಿರೆ :** ದಿನಾಂಕ : 16-12-2018ನೇ ಭಾನುವಾರದಂದು ಮೂಡಬಿದಿರೆಯ ಬೋರುಗುಡ್ಡೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವು ಯಶಸ್ವಿಯಾಗಿ ನೆರವೇರಿತು. ಸಾಮಾಜಿಕ ಕಳಕಳಿಯ ಭಾಗವಾಗಿ ಆಯೋಜಿಸಿದ್ದ ಶಿಬಿರವು ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮತ್ತು ಆಳ್ವಾಸ್ ಆಸ್ಪತ್ರೆಯ ವತಿಯಿಂದ ಗ್ರಾಮಪಂಚಾಯತ್ ನೆಲ್ಲಿಕಾರು, ಪರಶುರಾಮ ಸೇವಾ ಟ್ರಸ್ಟ್ (ರಿ.) ಬೋರುಗುಡ್ಡೆ, ವಿಶ್ವಹಿಂದೂ ಪರಿಷತ್ ಮಾತೃಶಕ್ತಿ, ಪರಶುರಾಮ ಭಜರಂಗದಳ ದುರ್ಗಾವಾಹಿನಿ ಘಟಕ, ಬೋರುಗುಡ್ಡೆ, ಸ್ತ್ರೀ ಶಕ್ತಿ ಬೋರುಗುಡ್ಡೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೋರುಗುಡ್ಡೆ ಇವರ ಸಹಯೋಗದೊಂದಿಗೆ ನಡೆಯಿತು.

ಶಿಬಿರದ ಉದ್ಘಾಟನೆಯನ್ನು ಮೂಡಬಿದಿರೆ ಆಳ್ವಾಸ್ ಆಯುರ್ವೇದ ಆಸ್ಪತ್ರೆಯ ವೈದ್ಯರಾದ ಡಾ. ವಾಹಿದಾ ಬಾನು ನೆರವೇರಿಸಿ ಆಳ್ವಾಸ್ ಆಸ್ಪತ್ರೆಯ ವಿವಿಧ ಸೌಲಭ್ಯಗಳು ಸಾಮಾಜಿಕ ಕಳಕಳಿಯ ಕುರಿತು ಮಾತನಾಡಿ ಶುಭಹಾರೈಸಿದರು.



ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಬಿಪಿನ್ ಚಂದ್ರ ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ ಶ್ರೀ ಸರಸ್ವತಿ ಸಹಕಾರಿಯ ಸಹಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಸಾಮಾಜಿಕ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿ ಇಂತಹ ವೈದ್ಯಕೀಯ ಶಿಬಿರದ ಸಂಪೂರ್ಣ ಸದುಪಯೋಗವನ್ನು ಸಾರ್ವಜನಿಕರು ಪಡಿದುಕೊಳ್ಳುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.

## 7ನೇ ವಾರ್ಷಿಕೋತ್ಸವ



**ಶಿಗ್ಗಾಂವ :** ದಿನಾಂಕ : 16.12.2018 ರಂದು ಶ್ರೀ ಪುಟ್ಟರಾಜ ಗವಾಯಿ ಸಚೇತನ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಇದರ 7ನೇ ವಾರ್ಷಿಕೋತ್ಸವದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತಪ್ಪ.ಯು.ವ್ಹಿ ಯವರು ವಹಿಸದ್ದರು ಹಾಗೂ ಸಾನಿಧ್ಯವನ್ನು ಬಂಕಾಪೂರದ ಷ.ಬ್ರ.ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯರು ವಹಿಸಿದ್ದರು. ಸಭೆಯಲ್ಲಿ ಶ್ರೀ ಕಲ್ಯಾಣಕುಮಾರ ಶ್ಯಾಮಶೆಟ್ಟರ ಅಧ್ಯಕ್ಷರು, ಜಿಲ್ಲಾ ಸಹಕಾರಿ ಯುನಿಯನ್ ಹಾವೇರಿ ಹಾಗೂ ಶ್ರೀ ಮಂಜುನಾಥ ಶೆಲ್ಲಿಕೇರ, ಮ್ಯಾನೇಜರ, ಕೆನರಾ ಬ್ಯಾಂಕ, ಬಂಕಾಪೂರ ಮತ್ತು ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

# ತರಬೇತಿ ಹಾಗೂ ಪುನರ್‌ಮನನ ಶಿಬಿರ ಸಮರ್ಪಣಾ ಮನೋಭಾವದಿಂದ ವ್ಯಕ್ತಿ ಸಂಸ್ಥೆ ಬೆಳೆಯುತ್ತದೆ – ಡಾ. ಎಸ್. ಶಿವಾನಂದ



**ಹೊಸಪೇಟೆ :** ಅಹನಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಪೇಟೆ ಸದರಿ ಸಹಕಾರಿಯ ಸಿಬ್ಬಂದಿ ವರ್ಗಕ್ಕೆ ಹಮ್ಮಿಕೊಂಡಿದ್ದ ತರಬೇತಿ ಹಾಗೂ ಪುನರ್‌ಮನನ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಡಾ.ಎಸ್ ಶಿವಾನಂದ ರವರು ಯಾವುದೇ ವ್ಯಕ್ತಿ, ಸಂಸ್ಥೆಗಳು ಎತ್ತರೆತ್ತಕ್ಕೆ ಬೆಳೆಯಲು ಸಕಾರಾತ್ಮಕ ಸಮರ್ಪಣಾ ಮನೋಭಾವನೆಯನ್ನು ಪ್ರತಿಯೊಬ್ಬರೂ ರೂಢಿಸಿಕೊಂಡು ಅದರಂತೆ ನಡೆಯಬೇಕೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ವೀರಭದ್ರಪ್ಪ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಆರ್ಥಿಕ ಸಂಸ್ಥೆಗಳು ಮುಂಚೂಣಿಯುತ್ತ ಸಾಗಬೇಕೆಂದು ಸಿಬ್ಬಂದಿಗಳೆಲ್ಲಾ ಶಿಸ್ತು, ಸಮಯಪ್ರಜ್ಞೆ, ಗುರಿಗಳನ್ನು ಇರಿಸಿಕೊಂಡು ಪರಿಶ್ರಮ ಪಡಬೇಕು. ಅಂದಾಗ ಮಾತ್ರ ಎಲ್ಲರ ಪ್ರಯತ್ನಗಳಿಗೆ ನೈಜವಾದ ಅರ್ಥ ಬರುತ್ತದೆ ಹಾಗೂ ನಮ್ಮ ಸಹಕಾರಿಯು ಐದು ವರ್ಷಗಳಿಂದ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಸದಸ್ಯ ಗ್ರಾಹಕರಿಗಾಗಿ ಹೊಸ ಸೇವಾ ಯೋಜನೆಗಳನ್ನು ರೂಪಿಸಕೊಳ್ಳಲಾಗಿದ್ದು, ಸಿಬ್ಬಂದಿಗಳೆಲ್ಲಾ ಸಹಕಾರಿಯನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಲು ಕೈಜೋಡಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರು. ಅತಿಥಿಗಳಾದ ರಾಣಿಬೆನ್ನೂರಿನ ನ್ಯಾಯವಾದಿ ಬಸವಗೌಡ ಹುಲಮನಿ, ಹರಪನಹಳ್ಳಿ ಪ್ರೌಢಶಾಲೆಯ ಶಿಕ್ಷಕ ರಾಜಶೇಖರ ಬಣಕಾರ ಭಾಗವಹಿಸಿ ಮಾತನಾಡಿದರು. ಸಭೆಯ ಸಾನಿಧ್ಯವನ್ನು ಲಿಂಗನಾಯಕನಹಳ್ಳಿ ವಿರಭಕ್ತಮಠದ ಶ್ರೀ ಚನ್ನವೀರ ಶಿವಯೋಗಿಗಳು ವಹಿಸಿ ಆಶೀರ್ವಚನ ನೀಡಿದರು. ನಿರ್ದೇಶಕರ ರಂಜಿತ್ ಎಂ. ಸಿ.ಇ.ಓ ರಾಘವೇಂದ್ರ ಕುಲಕರ್ಣಿ, ಸಹಕಾರಿಯ ಐದು ಶಾಖೆಗಳ ಸಿಬ್ಬಂದಿಗಳು ಭಾಗವಹಿಸಿದರು.

# ಆಯುಷ್ ಲೈಫ್ ಅಪ್ರೋಚ್ ಅವೇರ್ನೆಸ್ಸ್ ಕ್ಯಾಂಪಿಯನ್ ಕಾರ್ಯಕ್ರಮ

**ಬೆಂಗಳೂರು :** ಜನನಿಧಿ ಸೌಹಾರ್ದ ಸಹಕಾರಿಯು ನ್ಯಾಚ್ಯುರೋಪತಿ ದಿನದ ಪ್ರಯುಕ್ತ ಅಕ್ಟೋಬರ್ 2 2018ರಂದು ಆಯುಷ್ ಲೈಫ್ ಅಪ್ರೋಚ್ ಅವೇರ್ನೆಸ್ಸ್ ಕ್ಯಾಂಪಿಯನ್ ಕಾರ್ಯಕ್ರಮವನ್ನು ಸಹಕಾರಿಯ ಸಹಯೋಗದೊಂದಿಗೆ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಬೆಂಗಳೂರು, ಚಿತ್ರದುರ್ಗ, ತಿಪಟೂರು, ತುಮಕೂರು, ಕುಣಿಗಲ್ ಮತ್ತು ಹಾಸನ ಶಾಖಾ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ಒಂದೊಂದು ಶಾಲೆಗಳನ್ನು ಆಯ್ಕೆಮಾಡಿಕೊಂಡು ವಿದ್ಯಾಥಿಗಳ ಮೂಲಕ ಎಲ್ಲಾ ಕಡೆ ಒಂದೇ ಸಮಯಕ್ಕೆ ನ್ಯಾಚ್ಯುರೋಪತಿ ಉತ್ಪನ್ನಗಳನ್ನು ಉಪಯೋಗಿಸುವ ಬಗ್ಗೆ ಪ್ರಾಯೋಗಿಕವಾಗಿ ತಿಳುವಳಿಕೆ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.

ಆ ಕಾರ್ಯಕ್ರಮದಲ್ಲಿ ಸುಮಾರು 5508ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರ ಜೊತೆಗೆ ಜನನಿಧಿ ಸಹಕಾರಿಯು ಇಂಡಿಯಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾಯಿತು. ಇಂಡಿಯಾ ಬುಕ್ ಆಫ್ ರೆಕಾರ್ಡನ ಪ್ರಮಾಣಪತ್ರವನ್ನು ಕರ್ನಾಟಕದ



ಆರೋಗ್ಯಮಂತ್ರಿಗಳಾದ ಶ್ರೀ ಶಿವಾನಂದ ಎಸ್. ಪಾಟೀಲ ರವರು ಜನನಿಧಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಮಂಜಪ್ಪ ಹೆಚ್.ಎಲ್ ರವರಿಗೆ ವಿಶ್ವ ನ್ಯಾಚ್ಯುರೋಪತಿ ದಿನವಾದ 18.11.2018ರಂದು ವಿಧಾನಸೌಧದ ಸಭಾಂಗಣದಲ್ಲಿ ವಿತರಿಸಿದರು.

# ಜನತಾ ಪತ್ತಿನ ಸೌಹಾರ್ದ ಸಹಕಾರಿ : "ಸ್ವಯಂ ಉದ್ಯೋಗದಿಂದ ಸ್ವಾಭಿಮಾನದಡೆಗೆ"

**ಸಿಂಧನೂರು** : ದಿನಾಂಕ 15-12-2018 ರಂದು ಜನತಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಸಿಂಧನೂರು ಮತ್ತು ಸೆಲ್ಕೋ ಸೋಲಾರ್ ಲೈಟ್ ಪ್ರೈ.ಲಿ.ಸಿಂಧನೂರು ಇವರು ಜಂಟಿಯಾಗಿ ಸ್ತ್ರೀ ಶಕ್ತಿ ಗುಂಪುಗಳಿಗೆ "ಸ್ವಯಂ ಉದ್ಯೋಗದಿಂದ ಸ್ವಾಭಿಮಾನದಡೆಗೆ" ಎನ್ನುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಸೌರ ಶಕ್ತಿಯನ್ನು ಬೆಳೆಸಿಕೊಂಡು ರೊಟ್ಟಿ ಮಾಡುವ ಯಂತ್ರ, ಟೇಲರಿಂಗ್ ಮಷೀನ್, ಹಾಲು ಹಿಂಡುವ ಯಂತ್ರ, ಕಮ್ಮಾರ ಕೆಲಸ ಹೀಗೆ ಮುಂತಾದ ಕೆಲಸಗಳನ್ನು ಸೌರ ಶಕ್ತಿ ಯಂತ್ರಗಳ ಮುಖಾಂತರ ಸ್ವಯಂ ಉದ್ಯೋಗ ಪ್ರಾರಂಭಿಸುವ ಬಗ್ಗೆ ಸೆಲ್ಕೊ ಫೌಂಡೇಶನ್ ಬೆಂಗಳೂರು ಇದರ ಅಧಿಕಾರಿಯಾದ ಶ್ರೀ ಈರಣ್ಣ ಇವರು ನೆರೆದಿದ್ದ ಮಹಿಳೆಯರಿಗೆ ಮಾಹಿತಿ ನೀಡಿದರು.

ಈ ಯಂತ್ರಗಳನ್ನು ಖರೀದಿಸಲು ಬೇಕಾಗುವ ಆರ್ಥಿಕ ಸಹಾಯವನ್ನು ನೀಡುವುದಾಗಿ ಜನತಾ ಪತ್ತಿನ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ ಅವರು ಮಹಿಳೆಯರಿಗೆ ತಿಳಿಸಿದರು

ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ. ಎನ್ ಇವರು ಸ್ವಾಗತಿಸಿದರು ಮತ್ತು ಕಾರ್ಯಕ್ರಮದಲ್ಲಿ ಈಗಾಗಲೇ ಈ ಸೌರ ಶಕ್ತಿ ರೊಟ್ಟಿ ಮಾಡುವ ಯಂತ್ರದಿಂದ ದಿನಕ್ಕೆ 300 ರೊಟ್ಟಿ ಮಾಡಿ



ತಿಂಗಳಿಗೆ ಅಂದಾಜು 15000/-ಸಾವಿರ ರೂಪಾಯಿಗಳನ್ನು ದುಡಿಯುತ್ತಿರುವ ಸಿಂಧನೂರು ತಾಲೂಕಿನ ಹಂಪನಾಳ ಗ್ರಾಮದ ಯಶಸ್ವಿ ಮಹಿಳೆ ಶ್ರೀಮತಿ ಬಸಮ್ಮ ಇವರು ತಮ್ಮ ಅನುಭವವನ್ನು ಹಂಚಿಕೊಂಡರು ಹಾಗೆಯೆ ಸೌರ ಶಕ್ತಿ ಚಾಲಿತ ಟೇಲರಿಂಗ್ ಮಷೀನ್ ನಿಂದ ಉತ್ತಮ ಆರ್ಥಿಕ ಸ್ಥಿತಿ ಹೊಂದಿದ ಬಗ್ಗೆ ಸಿಂಧನೂರು ತಾಲೂಕಿನ ಪಗಡದಿನ್ನಿ(ಪೈ ಕ್ಯಾಂಪ್) ಗ್ರಾಮದ ಶ್ರೀ ಶ್ರೀನಿವಾಸ ಇವರು ಕೂಡ ತಮ್ಮ ಅನುಭವವನ್ನು ಹಂಚಿಕೊಂಡರು ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಮಧುಕರ ಗೌರಕರ್, ಶ್ರೀ ಎಸ್. ಶರಣೇಗೌಡ ಮತ್ತು ಸೇಲ್ಕೋ ಸೋಲಾರ್ ಲೈಟ್ ಪ್ರೈ.ಲಿ. ಕಂಪನಿಯ ಶ್ರೀ ಸುಧಾಕರ ಮತ್ತು ಪ್ರವೀಣ ಉಪಸ್ಥಿತರಿದ್ದರು.

## ದಿ. ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ ನಿ., ಸವಣೂರ



ಸವಣೂರು : ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿಯ ಚೆಕ್ಕನ್ನು ಬೆಳಗಾವಿ ವಿಭಾಗದ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕಲ್ಮೇಶ್ ಇವರಿಗೆ ಸಲ್ಲಿಸಿದರು.

| ಸಹಕಾರಿಯ ಪ್ರಗತಿಯ ಕಿರುನೋಟ | |
|---|---|
| ಶೇರು ಬಂಡವಾಳ | ರೂ. 9,44,600.00 |
| ಕಾಯ್ದಿಟ್ಟ ಮತ್ತು ಇತರೆ ನಿಧಿಗಳು | ರೂ. 16,23,496.00 |
| ಒಟ್ಟು ಠೇವಣಿ | ರೂ. 9,40,09,229.00 |
| ಸಾಲ ಮತ್ತು ಮುಂಗಡಗಳು | ರೂ. 6,56,12,205.00 |
| ಹೂಡಿಕೆಗಳು | ರೂ. 3,19,60,097.00 |
| ನಿವ್ವಳ ಲಾಭ | ರೂ.9,10,113.00 |
| ಘೋಷಿಸಿದ ಲಾಭಾಂಶ | ಶೇ. 12% |



ಹೊಸಪೇಟೆ : ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಸದರಿ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಗಿದ್ದು, ಇದರಲ್ಲಿ ಆಡಳಿತ ಮಂಡಳಿಯ ಸದಸ್ಯರುಗಳಾದ ಶ್ರೀ ಎಲ್.ಎಸ್. ಆನಂದ್ ಉಪಾಧ್ಯಕ್ಷರು, ಶ್ರೀ ಜಿ. ಬಸವರಾಜ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ - ಬೆಂಗಳೂರು.

# ವಿಜಯಪುರ ಶ್ರೀ ಗುರುಮಾತೆಯರ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿಯಿಂದ ಗೃಹ ಸಚಿವರಿಗೆ ಮನವಿ



**ವಿಜಯಪುರ :** ಸನ್ಮಾನ್ಯ ಗೃಹ ಸಚಿವರಾದ ಡಾ. ಎಂ.ಬಿ. ಪಾಟೀಲರಿಗೆ ಮನವಿ ಸಲ್ಲಿಸಿದ ಶ್ರೀ ಗುರುಮಾತೆಯರ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಜಿಲ್ಲೆಯ ಬಡ ಮಹಿಳೆ ಅಭಿವೃದ್ಧಿಗಾಗಿ ನಿವೇಶನ ಮತ್ತು ಮನೆಗಳನ್ನು ಮಂಜೂರಿ ಮಾಡಲು ಮನವಿ ಸಲ್ಲಿಸಿದ ಮಹಿಳಾ ಸೌಹಾರ್ದದಿಂದ ಬರಗಾಲದ ಜಿಲ್ಲೆಗೆ ಹೆಸರುವಾಸಿಯಾದ ವಿಜಯಪುರ ಜಿಲ್ಲೆಯಲ್ಲಿ ಬರುವಂತಹ ರೈತ ಮಹಿಳೆಯರ ಉಪಕಸಬು ಅಂದರೆ ಧನ, ಕರುಗಳನ್ನು ಸಾಕಿ ಹೈನುಗಾರಿಕೆ ಮಾಡಿ ಉಪಜೀವನ ಸಾಗಿಸಲು ಬರಗಾಲ ಬಿದ್ದಿದೆ. ನಗರ ಪ್ರದೇಶದಲ್ಲಿ ಸಣ್ಣ ಮಟ್ಟ ವ್ಯವಹಾರ ಮಾಡಲು ಧನ ಸಹಾಯದ ಅವಶ್ಯವಿರುತ್ತದೆ. ಇದರ ಜೊತೆಗೆ ಕೂಲಿ ಮಾಡಿ ಜೀವನ ಮಾಡಿ ರಾತ್ರಿ ವಸತಿ ಮಾಡಲಿಕ್ಕೆ ಮನೆಗಳು ಇರುವುದಿಲ್ಲ ಎಲ್ಲವನ್ನು ಸಮಗ್ರವಾಗಿ ಸರಕಾರದ ಗಮನ ಸೆಳೆಯುವಲ್ಲಿ ಮತ್ತು ಅಗತ್ಯ ಕ್ರಮ ಕೈಗೊಳ್ಳಲು ಒತ್ತಾಯಿಸಿ ನಗರದಲ್ಲಿರುವ ಶ್ರೀ ಗುರುಮಾತೆಯರ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಹಿರೇಮಠ ಇವರ ನೇತೃತ್ವದಲ್ಲಿ ಗೃಹ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀಮತಿ ಶೋಭಾ ಮಹಾದೇವಯ್ಯ ಗಚ್ಚಿನಮಠ, ಸುವರ್ಣ ರವಿ ಬೆನಕಟ್ಟಿ (ಹಿರೇಮಠ ದಾದಮಟ್ಟಿ) ಮುಖ್ಯ ಕಾರ್ಯನಿರ್ವಾಹಕರಾದ ವಿಜಯಲಕ್ಷ್ಮೀ ಹಿರೇಮಠ, ಶ್ರದ್ಧಾ ಬಿದರಿ, ಮೇಘಾ ಹಿರೇಮಠ, ಬೀಳಗಿ ಪಟ್ಟಣ ಸಹಕಾರಿ ಶಾಖೆ ವಿಜಯಪುರದ ನಿರ್ದೇಶಕರಾದ ಚನ್ನಬಸಯ್ಯ ಹಿರೇಮಠ, ಡಾ. ಅಂಧಾನಸ್ವಾಮಿ ಹಿರೇಮಠ, ಅಧ್ಯಕ್ಷರು ಮಾನಸ ಗಂಗೋತ್ರಿ ಶಿಕ್ಷಣ ಸಂಸ್ಥೆ ಬೆಳ್ಳುಬ್ಬಿ, ಹಾಗೂ ಲಕ್ಷ್ಮೀ ಸೌಹಾರ್ದ ಸಹಕಾರಿ ನಿರ್ದೇಶಕರಾದ ಜಿ.ಬಿ. ಅಂಗಡಿ ವೆಂಕಟೇಶ ನಗರ ಮುಂತಾದವರು ಇದ್ದರು.

## ಕ್ಯಾಲೆಂಡರ್ ಬಿಡುಗಡೆ



ಸಿರವಾರ : ಜಂಬಲದಿನ್ನಿ ಸೌಹಾರ್ದ ಪತ್ತಿನ ಸಹಕಾರಿ ನಿ., ಸಿರವಾರ ಇದರ ನೂತನ 2019 ವರ್ಷದ ಕ್ಯಾಲೆಂಡರ್ ಬಿಡುಗಡೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ. ಬಸವರಾಜ ಹಾಗೂ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ಬಿಡುಗಡೆ ಮಾಡಲಾಯಿತು ಹಾಗೂ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮಂಜುನಾಥ ಗಿರಡ್ಡಿ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದರು.



ವಿಜಯಪುರ : ಸಿದ್ದಸಿರಿ ಸೌಹಾರ್ದ ಸಹಕಾರಿಯ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ.



ಭದ್ರವತಿ : ಕೈವಾರ ಶ್ರೀ ಗುರು ಯೋಗಿನಾರಾಯಣ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.



ಸಿಂಧನೂರು : ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ.




ಮಂಡ್ಯ: ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ

# ಜಿಲ್ಲಾ ಸಹಕಾರಿ ಒಕ್ಕೂಟಕ್ಕೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸದಸ್ಯತ್ವ ಪಡೆಯಲು ಮನವಿ - ಶ್ರೀ ಜಿ. ಶ್ರೀಧರ



ಶ್ರೀ ಜಿ. ಶ್ರೀಧರ
ನಿರ್ದೇಶಕರು,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

## ಕೊಪ್ಪಳ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆ



ಶ್ರೀ ನಾಗಲಿಂಗಪ್ಪ ಬಿ.ಪತ್ತಾರ
ಅಧ್ಯಕ್ಷರು, ಕೊಪ್ಪಳ ಜಿಲ್ಲಾ ಸೌಹಾರ್ದ
ಸಹಕಾರಿಗಳ ಒಕ್ಕೂಟ ನಿ., ಕೊಪ್ಪಳ



ಶ್ರೀ ಶಂಕರಗೌಡ ಎಲ್.ಹೆಚ್.
ಉಪಾಧ್ಯಕ್ಷರು, ಕೊಪ್ಪಳ ಜಿಲ್ಲಾ ಸೌಹಾರ್ದ
ಸಹಕಾರಿಗಳ ಒಕ್ಕೂಟ ನಿ., ಕೊಪ್ಪಳ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ ಹಾಗೂ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್. ಹೆಚ್ ರವರು ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಸದಸ್ಯತ್ವವನ್ನು ಪಡೆಯಲು ವಿನಂತಿಸಿದ್ದಾರೆ. ಈ ಒಕ್ಕೂಟದ ಸದಸ್ಯತ್ವವನ್ನು ಪಡೆಯುವುದರಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಸವಾಲುಗಳನ್ನು ಎದರಿಸಲು ಒಗ್ಗಟ್ಟಿನ ಬಲಕ್ಕೆ ಕೈ ಜೊಡಿಸಿದಂತೆ ಆಗುತ್ತದೆ. ಸೌಹಾರ್ದ ಸಹಕಾರಿಗಳು ಅನೇಕ ಸಮಸ್ಯೆಗಳನ್ನು ಪರಿಹಾರವನ್ನು ಕಂಡುಕೊಳ್ಳಲು ಉತ್ತಮ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

ಸೌಹಾರ್ದ ಸಹಕಾರಿಗಳಿಗೆ ತಕ್ಷಣ ಬೇಕಾಗುವ ನೆರವು ಹಾಗು ಮಾರ್ಗದರ್ಶನ ದೊರೆಯುತ್ತದೆ. ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ ಉತ್ತಮ ನಾಯಕತ್ವದ ವೇದಿಕೆಯಲ್ಲಿ ಈ ಒಕ್ಕೂಟದ ಒದಗಿಸುತ್ತದೆಯೆಂದು ತಿಳಿಸಿರುವ ಜಿ ಶ್ರೀಧರ ರವರು ಈಗಾಗಲೇ ಜಿಲ್ಲೆಯ 65 ಸೌಹಾರ್ದ ಸಹಕಾರಿಗಳು ಒಕ್ಕೂಟದ ಸದಸ್ಯತ್ವವನ್ನು ಪಡೆದಿದ್ದು ಇನ್ನೂ 120 ಕ್ಕಿಂತ ಹೆಚ್ಚು ಸೌಹಾರ್ದ ಸಹಕಾರಿಗಳು ಸದಸ್ಯತ್ವವನ್ನು ಪಡೆಯಲು ಬಾಕಿ ಇದೆ. ಒಂದು ಸದಸ್ಯತ್ವದ ಮೊತ್ತ 5,000/– ಗಳಾಗಿದ್ದು ಎಲ್ಲಾ ಸೌಹಾರ್ದ ಸಹಕಾರಿಗಳು 2 ಶೇರುಗಳನ್ನು ಪಡೆಯುವುದರ ಮೂಲಕ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟವನ್ನು ಬಲ ಪಡಿಸಲು ವಿನಂತಿಸಿದ್ದಾರೆ.

## ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆ

### ದಿ ಧಾರವಾಡ ಡಿಸ್ಟ್ರಿಕ್ಟ್ ಲೀಗಲ್ ಪ್ರ್ಯಾಕ್ಟಿಷನರ್ಸ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿಗಳ ನಿ., ಧಾರವಾಡ.



ಶ್ರೀ ವಿ.ಡಿ. ಕಾಮರಡ್ಡಿ
ಅಧ್ಯಕ್ಷರು



ಶ್ರೀ ಅನೂಪ ದೇಶಪಾಂಡೆ
ಉಪಾಧ್ಯಕ್ಷರು

### ವಜ್ರಗಿರಿ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಮೈಸೂರು



ಶ್ರೀ ಸೋಮಶೇಖರ ಆರ್.
ಅಧ್ಯಕ್ಷರು



ಶ್ರೀ ಚಂದ್ರಶೇಖರ ಎಂ.ಡಿ.
ಉಪಾಧ್ಯಕ್ಷರು

# ಸಹಕಾರ ಸಂಘಗಳ ಮೂಲಕ ರಾಜ್ಯ ಸರಕಾರದ ಮಹಾತ್ವಾಕಾಂಕ್ಷೆ ಬಡವರ ಬಂಧು ಯೋಜನೆ

▸▸ ಶಂಕರ ಎಸ್.

ದಿನನಿತ್ಯ ಬೀದಿ ವ್ಯಾಪಾರಿಗಳಿಗೆ ಆರ್ಥಿಕ ಶಕ್ತಿ ತುಂಬುವ ಉದ್ದೇಶದಿಂದ ಸಹಕಾರಿ ಸಂಸ್ಥೆಗಳ ಮೂಲಕ ಬಡವರ ಬಂಧು ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ. ಈ ಯೋಜನೆಯು ಬಡ್ಡಿರಹಿತ ಕಿರು ಸಾಲಪಡೆಯುವ ಸರಳ ವಿಧಾನವಾಗಿದೆ. ಕಡು ಬಡವರು ಪ್ರಸಕ್ತ ಲೇವಾದೇವಿದಾರರಿಂದ ಬೆಳಗ್ಗೆ ಹಣ ಪಡೆದು ಸಂಜೆ ಪಾವತಿಸುತ್ತಿರುವ ಸಣ್ಣ ವ್ಯಾಪಾರಸ್ಥರನ್ನು ರಕ್ಷಿಸುವ ಉದ್ದೇಶದಿಂದ ಬೀದಿ ಬೀದಿ ವ್ಯಾಪಾರಿಗಳಿಗೆ ಸರ್ಕಾರದಿಂದಲೇ ನಿತ್ಯ ದುಡಿಮೆ ಬಂಡವಾಳ ಒದಗಿಸುವ ಮಹಾತ್ವಾಕಾಂಕ್ಷಿ ಯೋಜನೆ ಇದಾಗಿದೆ. ಮೀಟರ್ ಬಡ್ಡಿ ದಂಧೆಗೆ ಸಿಲುಕಿರುವ ಕಡು ಬಡವರು ಹಾಗೂ ಕೆಳವರ್ಗದ ಜನರಿಗೆ ರಕ್ಷಣೆ ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆಗೆ ರಸ್ತೆ ಬದಿಯಲ್ಲಿ ತಳ್ಳುವ ಗಾಡಿ ಅಥವಾ ಮೋಟಾರು ವಾಹನಗಳಲ್ಲಿ ಪಾನೀಯ, ತಿಂಡಿ, ಊಟ ಮತ್ತಿತರ ಹೋಟೆಲ್ ಸೇವೆ ಒದಗಿಸುವ, ಬೀದಿಗಳಲ್ಲಿ ಹಣ್ಣು, ತರಕಾರಿ, ಹೂವು, ಬುಟ್ಟಿ ಮತ್ತಿತರ ಪರಿಕರಗಳನ್ನು ಮಾರಾಟ ಮಾಡುವ, ಪಾದರಕ್ಷೆಗಳು, ಚರ್ಮ ಉತ್ಪನ್ನಗಳನ್ನು ರಿಪೇರಿ ಮಾಡುವ, ಆಟದ ಸಾಮಾನು, ಗೃಹೋಪಯೋಗಿ ಇತ್ಯಾದಿ ವ್ಯಾಪಾರದಲ್ಲಿ ತೊಡಗಿರುವವರು ಬಡವರಿಗೆ ಈ ಯೋಜನೆಗೆ ಅರ್ಹರಾಗುತ್ತಾರೆ.

ಈ ಯೋಜನೆಯು ಸಹಕಾರ ಬ್ಯಾಂಕಿನ ಮೂಲಕ ಮಾತ್ರ ಸಾಲ ಸೌಲಭ್ಯ ಒದಗಿಸಲಾಗುತ್ತಿದ್ದು, ಪ್ರತಿ ನಗರ ಪ್ರದೇಶಕ್ಕೆ ಇದಕ್ಕಾಗಿಯೋ ಪ್ರತ್ಯೇಕವಾಗಿ ಒಂದು ಸಹಕಾರ ಬ್ಯಾಂಕ್ ಮತ್ತು ಮೊಬೈಲ್ ಬ್ಯಾಂಕಿಂಗ್ ಘಟಕವನ್ನು ಗುರುತಿಸುವ ಮೂಲಕ ಸಾಲ ಸೌಲಭ್ಯವನ್ನು ನೀಡಲಾಗುವುದು.

ಈ ಯೋಜನೆಗೆ ಬಡವರ ನೋಂದಾಯಿತ ವ್ಯಾಪಾರಿಗಳ ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್, ತಾವು ವ್ಯಾಪಾರ ನಡೆಸುತ್ತಿರುವ ಸ್ಥಳದ ಪೋಟೋ, ಸ್ಥಳೀಯ ಸಂಸ್ಥೆಗಳ ಗುರುತಿನ ಚೀಟಿ ನೀಡಿ, ಶೂನ್ಯ ಬ್ಯಾಂಕ್ ಬ್ಯಾಲೆನ್ಸ್ ಉಳಿತಾಯ



ಖಾತೆ ತೆರೆಯುವ ಮೂಲಕ ಸಾಲ ಸೌಲಭ್ಯವನ್ನು ಪಡೆಯಬಹುದಾಗಿದೆ.

ಈ ಯೋಜನೆಯು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲೂ ಜಾರಿಯಾಗಿದ್ದು ರೂ 2000 ಸಾವಿರದಿಂದ ರೂ 10000ಸಾವಿರ ವರೆಗೆ ಬಡ್ಡಿ ರಹಿತ ಸಾಲ ಪಡೆದ ಮುಂದಿನ 3 ತಿಂಗಳ ಒಳಗಾಗಿ ಪ್ರತಿದಿನ ರೂ 100 ಗಳಂತೆ ಸಹಕಾರ ಬ್ಯಾಂಕ್‌ಗೆ ಮರು ಪಾವತಿ ಮಾಡಿದರೆ ಇದರ ಜೊತೆಗೆ ಶೇ 10ರಷ್ಟು ಹೆಚ್ಚು ಸಾಲ ಒದಗಿಸಿ ಸಾಲದ ಮೊತ್ತವನ್ನು ರೂ 15000 ಸಾವಿರಕ್ಕೆ ಹೆಚ್ಚಿಸಿಕೊಳ್ಳುವ ಅವಕಾಶ ಇದಾಗಿದೆ. ಸಕಾಲಕ್ಕೆ ಸಾಲ ಮರಪಾವತಿಸುವವರ ಮೂಲಕ ಕ್ರೆಡಿಟ್ ಸ್ಕೋರ್ ಏರಿಕೆ ಆಗಲಿದೆ. ನಿಗದಿತ ಸಮಯದಲ್ಲಿ ಸಾಲ ಮರುಪಾವತಿ ಮಾಡದವರ ಸ್ಕೋರ್ ಕಡಿಮೆ ಆಗಲಿದೆ ಹಾಗೂ ರಸ್ತೆ ಬದಿಯಲ್ಲಿ ಸ್ವಚ್ಛತೆಯನ್ನು ಹಾಳು ಮಾಡುವ, ಪರಿಸರಕ್ಕೆ ಹಾನಿಯುಂಟು ಮಾಡುವ ವಸ್ತುಗಳನ್ನು ಮಾರಾಟ ಮಾಡುವವರಿಗೆ ಈ ಯೋಜನೆಯ ಸೌಲಭ್ಯ ದೊರೆಯುವುದಿಲ್ಲ. ಈ ಯೋಜನೆಯನ್ನು ನೋಡೆಲ್ ಅಧಿಕಾರಿಗಳ ಮೂಲಕ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಲು ನಿಯೋಜಿಸಲಾಗಿದೆ. ಆದ್ದರಿಂದ ಬಡವರ ಬಂಧು ಯೋಜನೆಯ ಸಹಕಾರ ಸಂಸ್ಥೆಗಳ ಮೂಲಕ ಬಡವರ ಹಿತಾರಕ್ಷಣೆಯನ್ನು ಕಾಪಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

## ಶ್ರೀ ಭ್ರಮರಾಂಬ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮ





**ಮಸ್ಕಿ :** ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಮಸ್ಕಿಯ ಮೂರನೇ ಶಾಖೆಯಾದ ಸಿರುಗುಪ್ಪ ಶಾಖೆಯು ಹತ್ತು ವರ್ಷ ಪೂರೈಸಿದ ಪ್ರಯುಕ್ತ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪದ ತಾಲೂಕು ಕ್ರೀಡಾಂಗಣದಲ್ಲಿ ದಿನಾಂಕ : 21.12.2018, ಶುಕ್ರವಾರ ರಂದು ದಶಮಾನೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಖ್ಯಾತ ಸಂಗೀತಗಾರ ಶ್ರೀ ರಾಜೇಶ್ ಕೃಷ್ಣನ್ ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ಐ.ಎಸ್.ಗಿರಡ್ಡಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಗುಲ್ಬರ್ಗಾ ಪ್ರಾಂತ ವಿಭಾಗ, ರಾಯಚೂರು ಅವರು ಶ್ರೀ ಭ್ರಮರಾಂಬ ಸಹಕಾರಿಯು ರಾಜ್ಯದಲ್ಲಿ ಉತ್ತಮ ಸಹಕಾರಿಗಳಲ್ಲಿ ಒಂದಾಗಿದ್ದು, ಇತರ ಸಹಕಾರಿಗಳಿಗೆ ಮಾದರಿ ಸಹಕಾರಿಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಸಹಕಾರಿಯು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಆಶಿಸಿದರು. ಇನ್ನೊಬ್ಬ ಮುಖ್ಯ ಅತಿಥಿಗಳಾದ ಶ್ರೀ ಶರಣಗೌಡ.ಜಿ.ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪಸ್ಥಿತರಿದ್ದರು ಹಾಗೂ ಡಾ.ಮಧುಸೂದನ ಕಾರಿಗನೂರು ಅವರಿಗೆ "ದಶಮಾನೋತ್ಸವ" ಕಾರ್ಯಕ್ರಮದಲ್ಲಿ ಸನ್ಮಾನಿಸುವ ಮೂಲಕ ಅಭಿನಂದನೆಯನ್ನು ಗೌರವಪೂರ್ವಕವಾಗಿ ಸಲ್ಲಿಸಿದರು.

# ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳನ್ನು ಸದೃಢಗೊಳಿಸುವುದು

ಕನ್ನಡ ಅನುವಾದ : ಶ್ರೀಮತಿ ಕವಿತ ಆರ್.

**ಅನಿರೀಕ್ಷಿತ ಬೆಲೆಯ ಬದಲಾವಣೆ, ಉತ್ಪನ್ನಗಳ ಕೊರತೆ, ಶಿಕ್ಷಣದ ಕೊರತೆ, ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೆಲೆಯ ಅಭಾವ, ಮುಂತಾದ ಕಾರಣಗಳಿಂದ ಕೃಷಿ ಕ್ಷೇತ್ರವು ಅಪಾಯದ ಸ್ಥಿತಿಯಲ್ಲಿದೆ. ಸಹಕಾರ ಸಂಘಗಳು, ಕೃಷಿ ಉತ್ಪಾದಕರ ಸಂಘಟನೆಗಳು, ರೈತರ ಆಸಕ್ತಿ ಗುಂಪುಗಳು, ಸರಕು ಆಸಕ್ತಿ ಗುಂಪುಗಳು ಮತ್ತು ಇನ್ನಿತರ ಸಂಸ್ಥೆಗಳ ಅಡಿಯಲ್ಲಿ ರೈತರನ್ನು ಸಂಘಟಿಸುವ ಮೂಲಕ ಈ ಸಮಸ್ಯೆಗಳನ್ನು ಪರಿಹರಿಸಬಹುದು. ಮೌಲ್ಯದ ಸೇರ್ಪಡೆ ಚಟುವಟಿಕೆಗಳನ್ನು ಕೈಗೊಳ್ಳಲು ಹಣ್ಣುಗಳು ಮತ್ತು ತರಕಾರಿಗಳ ಪ್ರದೇಶದಲ್ಲಿ ಸಮಗ್ರ ಕೃಷಿ ಅಭಿವೃದ್ಧಿಗೆ ಸಮಗ್ರ ಮೂಲ ಮಟ್ಟದಲ್ಲಿ ವಿಸ್ತರಣೆ ಸೇವೆಗಳ ಪರಿಣಾಮಕಾರಿ ವಿತರಣಾ ಮೂಲಕ ಕೃಷಿ ಉತ್ಪನ್ನಗಳ ಮೂಲಕ ಕೃಷಿ ಸಂಸ್ಕರಣೆಯ ಅಗತ್ಯವಿರುತ್ತದೆ.**



ಭಾರತದಲ್ಲಿ ಕೃಷಿಯ ಇತಿಹಾಸ ಋಗ್ವೇದ ಕಾಲದಷ್ಟು ಹಳೆಯದು. ಇಂದು ಭಾರತ ಕೃಷಿ ಉತ್ಪಾದನೆಯಲ್ಲಿ ವಿಶ್ವಾದ್ಯಂತ ಎರಡನೇ ಸ್ಥಾನದಲ್ಲಿದೆ. ಭಾರತೀಯ ಆರ್ಥಿಕತೆಯಲ್ಲಿ ಕೃಷಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿ ಎಂಬುದು ಬೇಸಾಯ ಮತ್ತು ಅರಣ್ಯ ಕಲೆಯ ಮೂಲಕ ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಒಂದು ವಿಧಾನ. ಕೃಷಿ ಮತ್ತು ಅದಕ್ಕೆ ಸಂಬಂಧಿಸಿದಂತ ಕ್ಷೇತ್ರಗಳು ಮತ್ತು ಮೀನುಗಾರಿಕೆ 2013ರಲ್ಲಿ ಜಿಡಿಪಿಯ 13.7%ರಷ್ಟು ಇತ್ತು. ಕೃಷಿಯು ಮಾನವ ನಾಗರಿಕತೆಯ ಉಗಮಕ್ಕೆ ಕಾರಣವಾದ ಪ್ರಮುಖ ಬೆಳವಣಿಗೆಯಾಗಿತ್ತು, ಅಷ್ಟೆ ಅಲ್ಲ ಪಳಗಿಸಿದ ಪ್ರಾಣಿಗಳು ಮತ್ತು ಬೆಳೆಗಳ ಸಂಗೋಪನೆಯಿಂದಾಗಿ ಆಹಾರದ ಮಿಗುತ್ತಾಯಗಳು ಸೃಷ್ಟಿಯಾಗುವುದರಿಂದ ಅದು ಹೆಚ್ಚು ಜನಭರಿತವಾದ ಮತ್ತು ಶ್ರೇಣೀಕೃತವಾದ ಸಮಾಜಗಳ ಬೆಳವಣಿಗೆಗೆ ಕಾರಣವಾಗಿದೆ. ದುಡಿಮೆಯ ಕಾರ್ಯಪಡೆಯ ಪೈಕಿ ಸುಮಾರು 50%ರಷ್ಟು ಕೃಷಿಯಲ್ಲಿ ತೊಡಗಿದೆ. ಕೃಷಿಯು ರಾಷ್ಟ್ರೀಯ ಆದಾಯಕ್ಕೆ ಪ್ರಮುಖ ಕೊಡುಗೆಯಾಗಿದೆ ಹಾಗೂ ದೇಶಕ್ಕೆ ವಿದೇಶಿ ವಿನಿಮಯವನ್ನು ತರುತ್ತದೆ. ಭಾರತ ದೇಶದ ವಿಶಾಲವಾದ ಆರ್ಥಿಕ ಬೆಳವಣಿಗೆಯ ಹೋಲಿಕೆಯಲ್ಲಿ ಜಿಡಿಪಿಗೆ ಕೃಷಿಯ ಆರ್ಥಿಕ ಕೊಡುಗೆ ಸ್ಥಿರವಾಗಿ ಇಳಿಯುತ್ತಿದೆ. ಸಂಪನ್ಮೂಲಗಳ ಅಭಾವದಿಂದಾಗಿ , ಮಣ್ಣಿನ ಫಲವತತ್ತೆಗಳಲ್ಲಿನ ನಷ್ಟ ಅಂತರ್ಜಲ ಸಂಪನ್ಮೂಲಗಳ ಕಡಿತ, ಜೀವವೈವಿಧ್ಯೆಯ ನಷ್ಟ, ಅನಿರೀಕ್ಷೀತ ಹವಾಮಾನ ಬದಲಾವಣೆ, ತಂತ್ರಜ್ಞಾನ ಜ್ಞಾನದ ಕೊರತೆ ಮತ್ತು ಸಾಲದ ಅಸಮರ್ಪಕ ಲಭ್ಯತೆಯ ಕಾರಣದಿಂದಾಗಿ ಕಡಿಮೆ ಬೆಳೆ ಉತ್ಪಾದಕತೆಗೆ ಮತ್ತು ಸಣ್ಣ ಹಾಗೂ ಅಲ್ಪ ರೈತರ ಸಾಮಾಜಿಕ ಆರ್ಥಿಕ ಸ್ಥಿತಿಯಲ್ಲಿನ ಅವನತಿಗೆ ಸಮಸ್ಯೆಗಳನ್ನು ಎದುರಿಸುತ್ತಿದೆ.

ಕೃಷಿ ಕ್ಷೇತ್ರವು ಸದಾ ಅಪಾಯ ಹಾಗು ಅನಿಶ್ಚಿತತೆಯಿಂದ ಕೂಡಿರುತ್ತದೆ. ಕೃಷಿ ಉತ್ಪಾದಕರು ಪ್ರತಿದಿನ ಅಪಾಯಕಾರಿ ಪರಿಸರದಲ್ಲಿ ನಿರ್ಧಾರಗಳನ್ನು ಮಾಡುತ್ತಾರೆ. ಕೃಷಿ ಬಿಕ್ಕಟ್ಟು ಹಾಗು ಕೃಷಿ ಕ್ಷೇತ್ರದ ಸಮಸ್ಯೆಯು ಗ್ರಾಮೀಣ ಜನರ ಜೀವನೋಪಾಯದಲ್ಲಿ ನಿರಂತರವಾಗಿ ಪರಿಣಾವವನ್ನು ಬೀರುತ್ತದೆ. ಕೃಷಿ ಗಾತ್ರ, ಉತ್ಪಾದಕತೆ ಮತ್ತು ಆದಾಯ ಕಡಿಮೆಯಾಗುವುದರಿಂದ ಬಡತನ, ದೀರ್ಘಾವಧಿಯ ಸಂರಕ್ಷಣೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದರೆ ಇಂತಹ ಕಠಿಣ ಪ್ರಯತ್ನಗಳ ಮೂಲಕ ರೈತರ ಆದಾಯವನ್ನು ಹೆಚ್ಚಿಸಲು ಸಂಶೋಧಕರು, ವೈದ್ಯರು ಮತ್ತು ನೀತಿ ನಿಯಮ ನಿರೂಪಕರು ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಭಾರತ ಸರ್ಕಾರವು “2022ರ ವೇಳಗೆ ರೈತರು ದ್ವಿಗುಣ ವರಮಾನ ಪಡೆಯುತ್ತಾರೆ” ಎಂದು ಘೋಷಿಸಿದೆ. ಇದರಲ್ಲಿ ರೈತರ ವರಮಾನವನ್ನು ಹೆಚ್ಚಿಸುವ ಹಲವಾರು ಕಾರ್ಯಕ್ರಮಗಳು, ಕಾರ್ಯಾಚರಣೆಗಳನ್ನು ಹಮ್ಮಿಕೊಂಡಿದೆ. ರೈತರ ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಮಣ್ಣಿನ ಮತ್ತು ನೀರಿನ ಸಂಪನ್ಮೂಲವನ್ನು ಸಂರಕ್ಷಿಸುವುದು, ಸ್ಥಿತಿ ಸ್ಥಾಪಕತ್ವವನ್ನು ಸುಧಾರಿಸುವುದು ಮತ್ತು ಕೃಷಿಯೇತರ ಅಪಾಯಗಳನ್ನು ಕಡಿಮೆ ಮಾಡುವುದು ಈ ಧ್ಯೇಯದ ಪ್ರಮುಖ ಅಂಶವಾಗಿದೆ. ಪ್ರಧಾನ ಮಂತ್ರಿ ನಿರಾವರಿ ಯೋಜನೆ, ಪ್ರಧಾನಿ ಕೃಷಿವಿಮೆ ಯೋಜನೆ, ಮಣ್ಣಿನ ಆರೋಗ್ಯ ಕಾರ್ಡ್, ಕೃಷಿ ವಿಕಾಸ್ ಯೋಜನೆ, ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನೆ, ರಾಷ್ಟ್ರೀಯ ಭದ್ರತಾ ಮಿಷನ್, ರಾಷ್ಟ್ರೀಯ ತೋಟಗಾರಿಕಾ ಮಿಷನ್, ರಾಷ್ಟ್ರೀಯ ಜಾನುವಾರು ಮಿಷನ್, ಇತ್ಯಾದಿಗಳ ಮಿಷನ್‌ಗಳ ಮೂಲಕ ರೈತರನ್ನು ಸಂಪರ್ಕಿಸಲು ಹಾಗೂ ಅವರ ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಆದಾಯವನ್ನು ಗಳಿಸುವಂತೆ ಮಾಡುವುದು ಈ ಧ್ಯೇಯದ ಉದ್ದೇಶವಾಗಿದೆ.

ಈ ಕಾರ್ಯಕ್ರಮಗಳು ಹಾಗೂ ಉದ್ದೇಶಗಳ ಪರಿಣಾಮಕಾರಿ ಅನುಷ್ಠಾನವು ಹೆಚ್ಚಿನ ಆದಾಯ ಮತ್ತು ಜೀವನೋಪಾಯದ ಭದ್ರತೆಗೆ ಕಾರಣವಾಗುವ ಹೆಚ್ಚಿನ ಉತ್ಪಾದನೆ ಮತ್ತು ವೆಚ್ಚ ಕಡಿತವನ್ನು ಅರಿತುಕೊಳ್ಳುವ ಮೂಲಕ ರೈತ ಆದಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಅನಿರೀಕ್ಷಿತ ಬೆಲೆಯ ಬದಲಾವಣೆ, ಉತ್ಪನ್ನಗಳ ಕೊರತೆ, ಶಿಕ್ಷಣದ ಕೊರತೆ, ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಬೆಲೆಯ ಅಭಾವ, ಮುಂತಾದ ಕಾರಣಗಳಿಂದ

40ನೇ ಪುಟಕ್ಕೆ...

# ಹೊಸ ವರ್ಷಕ್ಕೆ ಹೊಸ ನಿರ್ಣಯ ಮಾಡೋಣವೇ?

▸▸ ಭಾವುರಾವ್ ಕುಲಕರ್ಣಿ, ಪ್ರಧಾನ ಕಚೇರಿ, ವ್ಯವಸ್ಥಾಪಕ, ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮುಖ್ಯ ರಸ್ತೆ, ಸಿಂಧನೂರು.

